# ವೆಂಕಾಮಾತ್ಯ ರಾಮಾಯಣದ ಬಾಲಕಾಂಡದ ವೈಶಿಷ್ಟ್ಯತೆ

**ಗಣೇಶಮೂರ್ತಿ ಜಿ.ಎಸ್.***

**DOI: https://doi.org/10.5281/zenodo.19415704**

**ABSTRACT**

18ನೇ ಶತಮಾನದ ಕವಿ ಹಾಗೂ ಬಹುಭಾಷಾ ವಿದ್ವಾಂಸ ವೆಂಕಾಮಾತ್ಯನು ವಾರ್ಧಕ ಷಟ್ಪದಿಯಲ್ಲಿ ರಚಿಸಿದ 'ಶ್ರೀರಾಮಕಥಾಮೃತ'ವು ಕೇವಲ ವಾಲ್ಮೀಕಿ ರಾಮಾಯಣದ ಅನುವಾದವಲ್ಲ; ಅದೊಂದು ವಿಶಿಷ್ಟ ಹಾಗೂ ಸ್ವತಂತ್ರ ಭಕ್ತಿಕಾವ್ಯ. ವಾಲ್ಮೀಕಿ ರಾಮಾಯಣದ ಬಾಲಕಾಂಡಕ್ಕೂ ವೆಂಕಾಮಾತ್ಯನ ಬಾಲಕಾಂಡಕ್ಕೂ ಇರುವ ನಿರೂಪಣಾ ವ್ಯತ್ಯಾಸಗಳು, ತಾತ್ವಿಕ ಚಿಂತನೆ ಹಾಗೂ ಭಕ್ತಿಪಾರಮ್ಯವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಕವಿಯು ಶ್ರೀರಾಮನನ್ನು ಸಾಮಾನ್ಯ ಮಾನವನನ್ನಾಗಿ ಚಿತ್ರಿಸದೆ, ಆರಂಭದಿಂದಲೇ ಸಾಕ್ಷಾತ್ ಪರಬ್ರಹ್ಮನೆಂದು ಶಿವ-ಪಾರ್ವತಿಯರ ಸಂವಾದದ ಮೂಲಕ ಪ್ರತಿಷ್ಠಾಪಿಸುತ್ತಾನೆ. ದಶರಥನ ಪುತ್ರಕಾಮೇಷ್ಟಿ, ಅಹಲ್ಯಾ ಶಾಪವಿಮೋಚನೆ, ಸೀತಾ ಸ್ವಯಂವರ ಮತ್ತು ಪರಶುರಾಮ ಗರ್ವಭಂಗದಂತಹ ಪ್ರಮುಖ ಪ್ರಸಂಗಗಳಲ್ಲಿ ವೆಂಕಾಮಾತ್ಯನು ಮಾಡಿರುವ ಸೃಜನಶೀಲ ಮಾರ್ಪಾಡುಗಳು ಆತನ ವೈಷ್ಣವ ನಿಲುವು ಹಾಗೂ ಸ್ವಂತಿಕೆಯನ್ನು ಅನಾವರಣಗೊಳಿಸುತ್ತವೆ. ವಾಲ್ಮೀಕಿಯ ಕಥಾಹಂದರವನ್ನು ಉಳಿಸಿಕೊಂಡು, ಪೌರಾಣಿಕ ಕಥೆಗಳು ಹಾಗೂ ಮಾನವೀಯ ಸಂವೇದನೆಗಳ ಸಮನ್ವಯದೊಂದಿಗೆ ರೂಪುಗೊಂಡಿರುವ ವೆಂಕಾಮಾತ್ಯನ ಬಾಲಕಾಂಡದ ಸಾಹಿತ್ಯಕ ಮೌಲ್ಯವನ್ನು ಇಲ್ಲಿ ಕಟ್ಟಿಕೊಡಲಾಗಿದೆ.

**KEYWORDS:** ವೆಂಕಾಮಾತ್ಯ ರಾಮಾಯಣ, ಬಾಲಕಾಂಡ, ಭಕ್ತಿಕಾವ್ಯ, ವಾಲ್ಮೀಕಿ ರಾಮಾಯಣ, ರಾಮತತ್ತ್ವ .

* **ಗಣೇಶಮೂರ್ತಿ ಜಿ.ಎಸ್.**, ಸಂಶೋಧನಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ವೆಂಕಾಮಾತ್ಯನು 18ನೇ ಶತಮಾನದ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿರುವ ಒಬ್ಬ ಬಹುಭಾಷಾ ವಿದ್ವಾಂಸ ಹಾಗೂ ಕವಿ. ಕನ್ನಡ ಮತ್ತು ಸಂಸ್ಕೃತ ಎರಡೂ ಭಾಷೆಗಳಲ್ಲಿಯೂ ಪಾಂಡಿತ್ಯವನ್ನು ಗಳಿಸಿದ್ದ ಈತನು ಹೈದರಾಲಿಯ ಆಡಳಿತಾವಧಿಯಲ್ಲಿ ಬಿದನೂರಿನ ಪ್ರಧಾನನಾಗಿ ಕಾರ್ಯ ನಿರ್ವಹಿಸಿದ್ದಾನೆ ಎಂಬ ಐತಿಹಾಸಿಕ ಮಾಹಿತಿಯಿಂದ ಅವನ ಸಾಮಾಜಿಕ-ರಾಜಕೀಯ ಹಿನ್ನೆಲೆ ಸ್ಪಷ್ಟವಾಗುತ್ತದೆ. ಇಂತಹ ಆಡಳಿತಾತ್ಮಕ ಜವಾಬ್ದಾರಿಗಳನ್ನು ಹೊತ್ತಿದ್ದ ವ್ಯಕ್ತಿಯೊಬ್ಬನು ಸಮಗ್ರ ರಾಮಾಯಣ ಕಾವ್ಯವನ್ನು ರಚಿಸಿರುವುದು, ಅವನ ಸಾಹಿತ್ಯಾಸಕ್ತಿಯೊಂದಿಗೆ ವೈದಿಕ ಧಾರ್ಮಿಕ ಚಿಂತನೆಯ ಗಾಢತೆಯನ್ನು ಸೂಚಿಸುತ್ತದೆ. ಇವನು ಕನ್ನಡದಲ್ಲಿ ವಾರ್ಧಕ ಷಟ್ಪದಿ ಛಂದಸ್ಸಿನಲ್ಲಿ ರಚಿಸಿದ ಬೃಹತ್ ಗಾತ್ರದ ರಾಮಾಯಣ ಕಾವ್ಯವು 9765 ಪದ್ಯಗಳನ್ನು ಒಳಗೊಂಡಿದೆ. ವೈದಿಕ ಸಂಪ್ರದಾಯವನ್ನು ಆಧಾರವಾಗಿಟ್ಟುಕೊಂಡಿರುವ ಈ ಕಾವ್ಯಕ್ಕೆ ಶ್ರೀಮದ್ರಾಮಾಯಣಂ, ಶ್ರೀರಾಮಕಥಾಮೃತ ಹಾಗೂ ವೆಂಕಾಮಾತ್ಯ ರಾಮಾಯಣ ಎಂಬ ವಿಭಿನ್ನ ಹೆಸರುಗಳು ಪ್ರಸಿದ್ಧವಾಗಿವೆ.

ವಾಲ್ಮೀಕಿ ರಾಮಾಯಣದ ಕಥಾವಿನ್ಯಾಸವನ್ನು ಬಹುತೇಕ ಅನುಸರಿಸಿರುವ ವೆಂಕಾಮಾತ್ಯನು, ತನ್ನ ಕಾವ್ಯವನ್ನು ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂಧಾಕಾಂಡ, ಸುಂದರಕಾಂಡ ಮತ್ತು ಯುದ್ಧಕಾಂಡ ಎಂದೇ ವಿಭಾಗಿಸಿದ್ದಾನೆ. ಇವುಗಳಲ್ಲಿ ಬಾಲಕಾಂಡವು ತನ್ನದೇ ಆದ ವೈಶಿಷ್ಟ್ಯಗಳನ್ನು ಒಳಗೊಂಡಿದೆ. ಈ ಕಾಂಡದಲ್ಲಿ ಒಟ್ಟು 1413 ಪದ್ಯಗಳು ದೊರಕಿದ್ದು, ಪೀಠಿಕಾ ಸಂಧಿಯ ಅನುಪಲಬ್ಧವಾಗಿರುವ 23 ಪದ್ಯಗಳನ್ನು ಸೇರಿಸಿಕೊಂಡರೆ ಸುಮಾರು 1436 ಪದ್ಯಗಳಾಗುತ್ತವೆ. ಕಥಾನಿರೂಪಣೆಯು ಶಿವನು ಪಾರ್ವತಿಗೆ ಹೇಳುವ ರಾಮಕಥೆಯನ್ನು ಸೂತಮುನಿಯು ಶೌನಕಾದಿ ಋಷಿಗಳಿಗೆ ವಿವರಿಸುವ ಚೌಕಟ್ಟಿನೊಳಗೆ ಆರಂಭವಾಗುತ್ತದೆ. ಬಾಲಕಾಂಡದ ಕಥೆ ಶ್ರೀರಾಮನ ಅವತಾರ, ದಶರಥನ ಯಜ್ಞ, ರಾಮ-ಸೀತಾ ವಿವಾಹ ಮುಂತಾದ ಪ್ರಮುಖ ಘಟನೆಗಳನ್ನು ಒಳಗೊಂಡಿದ್ದು, ಶ್ರೀರಾಮನ ವಿವಾಹದ ನಂತರ ದಶರಥಾದಿಗಳು ಅಯೋಧ್ಯೆಗೆ ಮರಳುವ ಸಂದರ್ಭದವರೆಗೆ ವಿಸ್ತಾರವಾಗಿ ನಿರೂಪಿಸಲಾಗಿದೆ. ವೆಂಕಾಮಾತ್ಯನು ತನ್ನದೇ ಆದ ಧಾರ್ಮಿಕ ಹಾಗೂ ತಾತ್ವಿಕ ದೃಷ್ಟಿಕೋನದ ಮೂಲಕ ರಾಮಕಥೆಯನ್ನು ಮರುರೂಪಿಸುತ್ತಾನೆ. ಹೀಗಾಗಿ ವೆಂಕಾಮಾತ್ಯ ರಾಮಾಯಣವನ್ನು ಕೇವಲ ಅನುವಾದ ಕಾವ್ಯವೆಂದು ಪರಿಗಣಿಸುವುದು ಸರಿಯಲ್ಲ; ಅದು ಕವಿಯ ವೈಯಕ್ತಿಕ ಭಕ್ತಿ, ತತ್ತ್ವಚಿಂತನೆ ಹಾಗೂ ಸಾಹಿತ್ಯಿಕ ಆಯ್ಕೆಗಳಿಂದ ರೂಪುಗೊಂಡ ಸ್ವತಂತ್ರ ಕಾವ್ಯವಾಗಿದೆ. ಕವಿಯ ದೃಷ್ಟಿಕೋನದ ಪ್ರಮುಖ ಲಕ್ಷಣವೆಂದರೆ ಅವನ ಗಾಢ ರಾಮಭಕ್ತಿ. ಈ ರಾಮಭಕ್ತಿಯೇ ಕಾವ್ಯದ ಪ್ರಧಾನ ಚಾಲಕಶಕ್ತಿಯಾಗಿ ಕಾರ್ಯ ನಿರ್ವಹಿಸುತ್ತದೆ. ಕವಿಯು ರಾಮನನ್ನು ಸಾಕ್ಷಾತ್ ಪರಬ್ರಹ್ಮನ ಅವತಾರವಾಗಿ ಪ್ರತಿಪಾದಿಸಲು ವಿಶೇಷ ಆಸಕ್ತಿಯನ್ನು ತೋರುತ್ತಾನೆ. ರಾಮನ ದೈವತ್ವ, ಅವತಾರತ್ವ ಹಾಗೂ ಸರ್ವಶಕ್ತಿತ್ವಗಳನ್ನು ಪುನಃಪುನಃ ಉಲ್ಲೇಖಿಸುವ ಮೂಲಕ ಕವಿ ತನ್ನ ವೈಷ್ಣವ ಧಾರ್ಮಿಕ ನಿಲುವನ್ನು ಕಾವ್ಯದುದ್ದಕ್ಕೂ ಪ್ರತಿಷ್ಠಾಪಿಸುತ್ತಾನೆ.

ರಾಮನ ಮಹಿಮೆಯ ಅಗಾಧತೆಯನ್ನು ವರ್ಣಿಸುವಲ್ಲಿ ವೆಂಕಾಮಾತ್ಯನಿಗೆ ವಿಶೇಷ ಆಕರ್ಷಣೆ ಇದೆ. ಕಥೆಯ ಬೆಳವಣಿಗೆಗೆ ನೇರವಾಗಿ ಸಂಬಂಧಿಸದ ಸಂದರ್ಭಗಳಲ್ಲಿಯೂ ರಾಮನ ನಾಮಸ್ಮರಣೆ, ಅವನ ಗುಣಗಾನ, ಅವತಾರದ ಉದ್ದೇಶಗಳನ್ನು ಕವಿ ವಿಸ್ತಾರವಾಗಿ ನಿರೂಪಿಸುತ್ತಾನೆ. ರಾಮನನ್ನೇ ಸಂಪೂರ್ಣ ಕಾವ್ಯದ ಕೇಂದ್ರಪಾತ್ರವನ್ನಾಗಿಸಿಕೊಂಡಿರುವ ವೆಂಕಾಮಾತ್ಯನು, ಇತರ ಪಾತ್ರಗಳನ್ನೂ ರಾಮನ ಮಹಿಮೆಯನ್ನು ಹೊಳೆಯಿಸುವ ಉಪಕರಣಗಳಂತೆ ಬಳಸಿಕೊಂಡಿರುವುದು ಗಮನಾರ್ಹ. ದಶರಥ, ವಿಶ್ವಾಮಿತ್ರ, ಸೀತೆ, ಲಕ್ಷ್ಮಣ, ಇತರ ದೇವತೆಗಳು ಹಾಗೂ ಋಷಿಗಳು ಮುಂತಾದ ಎಲ್ಲರೂ ರಾಮನ ದೈವತ್ವವನ್ನು ಪ್ರತಿಪಾದಿಸುವ ಹಿನ್ನೆಲೆಯಲ್ಲಿ ಅರ್ಥಪೂರ್ಣರಾಗುತ್ತಾರೆ. ಈ ಅಂಶದಿಂದ ವೆಂಕಾಮಾತ್ಯ ರಾಮಾಯಣವು ಪ್ರಧಾನವಾಗಿ ಭಕ್ತಿಕಾವ್ಯವಾಗಿ ರೂಪುಗೊಳ್ಳುತ್ತದೆ. ಈ ಭಕ್ತಿಕಾವ್ಯದ ಬುನಾದಿಯನ್ನು ಕವಿಯು ಬಾಲಕಾಂಡದಲ್ಲಿಯೇ ಸಮರ್ಥವಾಗಿ ಹಾಕಿಕೊಂಡಿದ್ದಾನೆ. ರಾಮನ ಅವತಾರದ ಕಾರಣಗಳು, ಅವನ ದೈವಿಕ ಸ್ವರೂಪ, ಅವನ ನಾಮಮಹಿಮೆ ಹಾಗೂ ಪರಬ್ರಹ್ಮತತ್ತ್ವಗಳನ್ನೆಲ್ಲ ಬಾಲಕಾಂಡದಲ್ಲಿಯೇ ಸ್ಥಾಪಿಸುವ ಮೂಲಕ, ಮುಂದಿನ ಕಾಂಡಗಳಲ್ಲಿ ಅವನ್ನು ವಿಸ್ತರಿಸಲು ಅಗತ್ಯವಾದ ತಾತ್ವಿಕ ನೆಲೆಯನ್ನು ಸಿದ್ಧಪಡಿಸುತ್ತಾನೆ.

ವೆಂಕಾಮಾತ್ಯನು ಪೀಠಿಕಾ ಸಂಧಿಯಲ್ಲಿ ತನ್ನ ಕಾವ್ಯದ ಉದ್ದೇಶ, ಮಹತ್ವ ಹಾಗೂ ಸ್ವರೂಪವನ್ನು ಸ್ವಯಂ ನಿರೂಪಿಸಿಕೊಂಡಿರುವುದು ಅವನ ಕಾವ್ಯಚೈತನ್ಯವನ್ನು ಅರಿಯಲು ಪ್ರಮುಖ ಆಧಾರವಾಗುತ್ತದೆ. ಕಾವ್ಯದ ಆರಂಭದಲ್ಲಿಯೇ ತನ್ನ ಕೃತಿಯ ಮೌಲ್ಯವನ್ನು ನಿರ್ಧರಿಸುವ ಈ ಪ್ರವೃತ್ತಿ, ಕವಿಯ ಆತ್ಮವಿಶ್ವಾಸದ ಜೊತೆಗೆ ತನ್ನ ಸಾಹಿತ್ಯಿಕ ನಿಲುವಿನ ಸ್ಪಷ್ಟತೆಯನ್ನೂ ಸೂಚಿಸುತ್ತದೆ. ತನ್ನ ಕಾವ್ಯವನ್ನು ಕುರಿತು ವೆಂಕಾಮಾತ್ಯನು "ಭೃಂಗಿಗಾನದಿಂ...ಚೆಲುವ ಕೋಕಿಲಕಾಕಲೀರಾವಮೆಸೆವಂತೆ ಕಲಿತತಂತ್ರೀಸ್ವನದ ಸಂಗೀತದಂದದಿಂ ಸುಲಲಿತಾನಂದಕರಮೆನಿಸಿರ್ಪುದೀ ಕೃತಿಯು ಸಕಲಜ್ಞ ಸತ್ಕವಿಗಳ"[1] ಎಂದು ಹೇಳುತ್ತಾನೆ. ಈ ಉಪಮೆಗಳು ಕಾವ್ಯದ ಸುಶ್ರಾವ್ಯತೆ, ಲಾಲಿತ್ಯ ಹಾಗೂ ರಸಪೂರ್ಣತೆಯನ್ನು ಸೂಚಿಸುವುದರ ಜೊತೆಗೆ, ಅದು ಪಂಡಿತವರ್ಗಕ್ಕೂ ಸಹೃದಯರಿಗೂ ಸಮಾನವಾಗಿ ಆನಂದವನ್ನು ನೀಡುವ ಶಕ್ತಿಯನ್ನು ಹೊಂದಿದೆ ಎಂಬ ಕವಿಯ ವಿಶ್ವಾಸವನ್ನು ವ್ಯಕ್ತಪಡಿಸುತ್ತವೆ.

ಮುಂದಿನ ಪದ್ಯದಲ್ಲಿ ವೆಂಕಾಮಾತ್ಯನು ತನ್ನ ಕಾವ್ಯವನ್ನು ಬಹುಮುಖ ಧಾರ್ಮಿಕ–ತಾತ್ವಿಕ ಕೇಂದ್ರವಾಗಿ ರೂಪಿಸಿಕೊಂಡಿರುವುದನ್ನು ವಿವರಿಸುತ್ತಾನೆ.

**ಯೋಗಿಗಳ ಭೂಷಣ ವಿರಾಗಿಗಳ ಮೆಯ್ತೊಡವು**
**ಭಾಗಧೇಯಕೆ ನಿಲಯಮನವರತ ವೇದಾಂತ–**
**ಭೋಗಿಯಾಲಯ ಸಾಂಖ್ಯತಂತ್ರಗಳ ತವರುಮನೆಯತುಲಭಕ್ತಿಯ ಮಂದಿರ**
**ಭಾಗವತರಾಲಯ ಕ್ರಿಯಾಮಂತ್ರಗಳ ನೆಲೆಯು**
**ಭೋಗಿಗಳ ಸುಮ್ಮಾನ ಸನ್ಮಾನ ಮಂತ್ರಿಗಳ**
**ಶೃಂಗಾರ ರಾಜ್ಯಾಧಿಪತ್ಯಪೆರ್ಚುಗೆ ನಿಖಿಳಭೂಭುಜರಿಗೀ ಕಾವ್ಯವು**

**(ಶ್ರೀರಾಮಕಥಾಮೃತ, ಬಾಲಕಾಂಡ, ಸಂಧಿ 1, ಪದ್ಯ 31)**

ವೆಂಕಾಮಾತ್ಯ ರಾಮಾಯಣವು ಲೋಕಧರ್ಮ ಮತ್ತು ಮೋಕ್ಷಧರ್ಮಗಳ ನಡುವಿನ ಸಮತೋಲನವನ್ನು ಸಾಧಿಸುವ ಗ್ರಂಥವೆಂದು ಕವಿ ತನ್ನದೇ ಮಾತುಗಳಲ್ಲಿ ನಿರೂಪಿಸುತ್ತಾನೆ. ಅನಂತರದ ಪದ್ಯದಲ್ಲಿ ವೆಂಕಾಮಾತ್ಯನು ತನ್ನ ಕಾವ್ಯದ ಮೂಲಪ್ರೇರಣೆಯನ್ನು ವಾಲ್ಮೀಕಿ ರಾಮಾಯಣದಿಂದ ಪಡೆದಿರುವುದನ್ನು ವಿನಯಪೂರ್ವಕವಾಗಿ ಒಪ್ಪಿಕೊಳ್ಳುತ್ತಾನೆ.

**ಮುನಿತಿಲಕವಾಲ್ಮೀಕಿವಾಗಮೃತಕಾಸಾರ**
**ಸನಿಹವನುಪಾನ ಲಕ್ಷ್ಮೀಕರವನಾಂತು ಶುಭ**
**ಘನಸರಸಮೃದುವಚನರಚನೆಯಿಂದೀ ಮಹಾಕಾವ್ಯಮಂ ಭಕ್ತಿಯಿಂದ**
**ಇನಕುಲೋದ್ಭವನಾದ ಸರ್ವಜ್ಞನಾಜ್ಞೆಯಿಂ**
**ವನಧಿಮೇಖಲೆಯೊಳುಂ ಪಂಡಿತಾಹ್ಲಾದಮೆನೆ**
**ವಿನಯದಿಂದುಸುರಿದಂ ಬಾಲವಾಲ್ಮೀಕಿ ತಾ ಶ್ರೀರಾಮಸಚ್ಚರಿತೆಯ**

**(ಶ್ರೀರಾಮಕಥಾಮೃತ, ಬಾಲಕಾಂಡ, ಸಂಧಿ 1, ಪದ್ಯ 32)**

ಈ ಪದ್ಯದಲ್ಲಿ ವಾಲ್ಮೀಕಿಯ ಪರಂಪರೆಯೊಂದಿಗೆ ತನ್ನ ಕಾವ್ಯದ ಸಂಬಂಧವನ್ನು ಸ್ಪಷ್ಟಪಡಿಸುತ್ತಾನೆ. ''ಘನ, ಸರಸ, ಮೃದು ವಚನರಚನೆ''ಯ ಮೂಲಕ ಭಕ್ತಿಯಿಂದ ರೂಪುಗೊಂಡ ಮಹಾಕಾವ್ಯವೆಂದು ಪ್ರತಿಪಾದಿಸುವ ಮೂಲಕ ತನ್ನ ಸ್ವತಂತ್ರ ಸೃಜನಶೀಲತೆಯನ್ನೂ ಸೂಚಿಸುತ್ತಾನೆ.

ವೆಂಕಾಮಾತ್ಯನು ಬಾಲಕಾಂಡದಲ್ಲಿ ರಾಮಾಯಣದ ಕಥೆ ಆರಂಭವಾಗಲು ಕಾರಣವಾಗುವ ಪೂರ್ವಭಾವಿ ಸನ್ನಿವೇಶವನ್ನು ವಿಶಿಷ್ಟವಾದ ತಾತ್ವಿಕ ಚೌಕಟ್ಟಿನೊಳಗೆ ನಿರೂಪಿಸಿದ್ದಾನೆ. ಕಾವ್ಯದ ಆರಂಭವನ್ನು ರಾಮತತ್ತ್ವದ ಕುರಿತು ವಿವಿಧ ಶಾಸ್ತ್ರಗಳಲ್ಲಿ ಕಂಡುಬರುವ ಭಿನ್ನಾಭಿಪ್ರಾಯಗಳನ್ನು ಸಮನ್ವಯಗೊಳಿಸುವ ಬೌದ್ಧಿಕ ಪ್ರಯತ್ನವಾಗಿ ರೂಪಿಸಿರುವುದು ಇಲ್ಲಿ ಗಮನಾರ್ಹವಾಗಿದೆ. ಈ ಹಿನ್ನೆಲೆಯಲ್ಲಿ ಕವಿ, ರಾಮಕಥೆಯ ಉದ್ಭವವನ್ನು ಋಷಿಮುನಿಗಳ ಪ್ರಶ್ನೆಗಳೊಂದಿಗೆ ಜೋಡಿಸುವ ಮೂಲಕ ಕಾವ್ಯಕ್ಕೆ ಧಾರ್ಮಿಕ-ತಾತ್ವಿಕ ಪ್ರಾಮುಖ್ಯತೆಯನ್ನು ನೀಡುತ್ತಾನೆ. ಬಾಲಕಾಂಡದ ಆರಂಭದಲ್ಲಿ ಋಷಿಗಳೆಲ್ಲರೂ ಸೂತಮುನಿಯ ಸಮಕ್ಷಮದಲ್ಲಿ ಭಾರತದ ಸತ್ಕಥೆಗಳ ಪೈಕಿ ಶ್ರೀರಾಮನ ಕಥೆಯೇ ಶ್ರೇಷ್ಠವೆಂದು ಅಂಗೀಕರಿಸುತ್ತಾರೆ. ಆದರೆ ಅದೇ ಸಂದರ್ಭದಲ್ಲಿ, ವಿವಿಧ ಶಾಸ್ತ್ರಗಳು ಮತ್ತು ಪುರಾಣಗಳಲ್ಲಿ ರಾಮನ ಪರಮತತ್ತ್ವವನ್ನು ನಾನಾ ರೀತಿಯಲ್ಲಿ ವರ್ಣಿಸಿರುವುದರಿಂದ ತಮಗೆ ಉಂಟಾಗಿರುವ ಸಂಶಯಗಳನ್ನು ಅವರು ವ್ಯಕ್ತಪಡಿಸುತ್ತಾರೆ. ಕೆಲವೆಡೆ ರಾಮನನ್ನು ಹರಿ-ಹರ-ಬ್ರಹ್ಮನ ಏಕೀಕೃತ ಸ್ವರೂಪವೆಂದು ಹೇಳಲಾಗಿದ್ದು, ಇನ್ನು ಕೆಲವೆಡೆ ಹರಿಹರಾತ್ಮಕನೆಂದೂ, ಮುಮ್ಮೂರ್ತಿಯೆಂದೂ ವರ್ಣಿಸಲಾಗಿದೆ; ಮತ್ತೊಂದೆಡೆ ಅವನನ್ನು ನಿರ್ಗುಣಬ್ರಹ್ಮನೆಂದು ಪರಮಾತ್ಮ ತತ್ತ್ವದೊಂದಿಗೆ ಸಮೀಕರಿಸಲಾಗಿದೆ. ಈ ವಿಭಿನ್ನ ವರ್ಣನೆಗಳು ರಾಮನ ಸ್ವರೂಪದ ಕುರಿತು ತಾತ್ವಿಕ ಗೊಂದಲವನ್ನು ಉಂಟುಮಾಡಿವೆ ಎಂಬುದನ್ನು ಕವಿ ಸ್ಪಷ್ಟವಾಗಿ

ಸೂಚಿಸುತ್ತಾನೆ.[2]

ಇದಲ್ಲದೆ, ರಾಮನ ಅವತಾರಕ್ಕೆ ಕಾರಣವನ್ನು ಕುರಿತು ವಿವಿಧ ಗ್ರಂಥಗಳಲ್ಲಿ ಭಿನ್ನಾಭಿಪ್ರಾಯಗಳು ಇರುವುದನ್ನೂ ಋಷಿಗಳು ಉಲ್ಲೇಖಿಸುತ್ತಾರೆ. ಬಾಲಕಾಂಡ, ಅಯೋಧ್ಯಾಕಾಂಡ, ಯುದ್ಧಕಾಂಡ, ಉತ್ತರಕಾಂಡಗಳಂತಹ ರಾಮಾಯಣ ಭಾಗಗಳಲ್ಲಿಯೂ, ಪದ್ಮಪುರಾಣ, ಭಾಗವತ, ಕೂರ್ಮಪುರಾಣ, ವಿಷ್ಣುಪುರಾಣ, ಮತ್ಸ್ಯಪುರಾಣ, ಸ್ಕಾಂದಪುರಾಣ, ಬ್ರಹ್ಮಾಂಡಪುರಾಣ, ಗರುಡಪುರಾಣಗಳಂತಹ ಪುರಾಣಗಳಲ್ಲಿ; ಸಾಂದೀಪ ಸಂಹಿತೆ, ರಾಮಕಾಶಿನಿ, ಧರ್ಮಕಾಂಡ, ಶೇಷಧರ್ಮ, ಸಂಗ್ರಹ ರಾಮಾಯಣ ಮುಂತಾದ ಗ್ರಂಥಗಳಲ್ಲಿ ರಾಮಾವತಾರದ ಕಾರಣವನ್ನು ವಿಭಿನ್ನ ರೀತಿಯಲ್ಲಿ ವಿವರಿಸಿರುವುದರಿಂದ ಸಂಶಯ ಮತ್ತಷ್ಟು ಗಾಢವಾಗುತ್ತದೆ. ಈ ಎಲ್ಲ ವಿಭಿನ್ನ ವಿವರಣೆಗಳಿಂದ ಉಂಟಾದ ಸಂಶಯವನ್ನು ನಿವಾರಿಸಬೇಕೆಂದು ಮುನಿವರರೆಲ್ಲರೂ ಸೂತಮುನಿಯನ್ನು ವಿನಮ್ರವಾಗಿ ಬೇಡಿಕೊಳ್ಳುತ್ತಾರೆ. ಆಗ ಸೂತಮುನಿಯು, ಈ ಸಂಶಯಗಳಿಗೆ ಉತ್ತರವಾಗಿ ಪರಮೇಶ್ವರನು ಗಿರಿಜಾತೆಗೆ ವಿವರಿಸಿದ ಶ್ರೀರಾಮನ ಸಚ್ಚರಿತ್ರೆಯನ್ನು ಹೇಳುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಈ ಮೂಲಕ ಕಾವ್ಯವು ಆರಂಭಗೊಳ್ಳುತ್ತದೆ.

ವೆಂಕಾಮಾತ್ಯ ರಾಮಾಯಣವು ಕೈಲಾಸ ಪರ್ವತದಲ್ಲಿ ಪರಮೇಶ್ವರನ ಒಡ್ಡೋಲಗದಲ್ಲಿ ಆರಂಭವಾಗುವುದು ಅದರ ಕಥಾರಚನೆಯ ಪ್ರಮುಖ ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ಕಾವ್ಯದ ಆದಿಯಲ್ಲಿ ಶಿವ–ಪಾರ್ವತಿ ಸಂವಾದವನ್ನು ಕೇಂದ್ರವಾಗಿಸಿಕೊಂಡು ಕವಿಯು ರಾಮಕಥೆಯನ್ನು ಪ್ರವೇಶಿಸುತ್ತಾನೆ. ಈ ಸಂದರ್ಭದಲ್ಲಿ ಪಾರ್ವತಿದೇವಿಯು ಶ್ರೀಹರಿಯ ಸನ್ಮಹಿಮೆಯನ್ನು ತಿಳಿಸಿಕೊಡಬೇಕೆಂದು ಶಿವನನ್ನು ಬೇಡಿಕೊಳ್ಳುತ್ತಾಳೆ. ಪಾರ್ವತಿಯ ಬೇಡಿಕೆಗೆ ಪ್ರತಿಕ್ರಿಯೆಯಾಗಿ ಶಿವನು, ಪರಬ್ರಹ್ಮನು ರಾಮನಾಗಿ ಭೂಲೋಕದಲ್ಲಿ ಅವತರಿಸಿದ ಕಥೆಯನ್ನು ಸಂಗ್ರಹವಾಗಿ ನಿರೂಪಿಸುತ್ತಾನೆ. ಇಲ್ಲಿ ರಾಮನನ್ನು ಸಾಕ್ಷಾತ್ ಪರಬ್ರಹ್ಮನ ಅವತಾರವೆಂದು ಪ್ರತಿಪಾದಿಸಲಾಗಿದೆ. ಈ ಸಂಕ್ಷಿಪ್ತ ನಿರೂಪಣೆಯು ಮುಂದಿನ ಕಥಾವಿಸ್ತರಣೆಗೆ ಬುನಾದಿಯಾಗುವಂತೆ ರೂಪುಗೊಂಡಿದೆ. ವಾಲ್ಮೀಕಿ ರಾಮಾಯಣದಲ್ಲಿ ನಾರದ ಮುನಿಯು ವಾಲ್ಮೀಕಿಗೆ ರಾಮಚರಿತೆಯನ್ನು ಸಂಕ್ಷಿಪ್ತವಾಗಿ ಹೇಳುವ ಪ್ರಸಂಗವು ಬಾಲಕಾಂಡದ ಮೊದಲನೆಯ ಸರ್ಗದ ಸಂಪೂರ್ಣ ಭಾಗವನ್ನು ಆವರಿಸಿದೆ. ಅಲ್ಲಿ ನಾರದ–ವಾಲ್ಮೀಕಿ ಸಂವಾದವೇ ರಾಮಾಯಣಕ್ಕೆ ಮೂಲ ಪ್ರೇರಣೆಯಾಗುತ್ತದೆ. ಆದರೆ ವೆಂಕಾಮಾತ್ಯ ರಾಮಾಯಣದಲ್ಲಿ ಈ ಕಾರ್ಯವನ್ನು ಶಿವ–ಪಾರ್ವತಿಯರ ಸಂವಾದವೇ ನಿರ್ವಹಿಸುತ್ತದೆ.

ವೆಂಕಾಮಾತ್ಯನು ತನ್ನ ಕಾವ್ಯದ ಎರಡನೇ ಸಂಧಿಯಲ್ಲಿ ಶಿವನು ಪಾರ್ವತಿಗೆ ರಾಮಾಯಣವನ್ನು ಸಂಗ್ರಹವಾಗಿ ನಿರೂಪಿಸುವ ಪ್ರಸಂಗವನ್ನು ತಂದು, ರಾಮಕಥೆಯ ದೈವಿಕ ಮೂಲವನ್ನು ಪರಮೇಶ್ವರನ ವಾಕ್ಯಕ್ಕೆ ನೇರವಾಗಿ ಕೊಂಡೊಯ್ಯುತ್ತಾನೆ. ಇದರ ಪರಿಣಾಮವಾಗಿ, ಮೂರನೇ ಸಂಧಿಯಲ್ಲಿ ನಾರದನು ವಾಲ್ಮೀಕಿಗೆ ಶ್ರೀರಾಮನ ಕಥೆಯನ್ನು ಹೇಳಿದನೆಂಬ ವಿಷಯವನ್ನು ಕವಿ ಸೂಚನಾತ್ಮಕವಾಗಿ ಮಾತ್ರ

ಉಲ್ಲೇಖಿಸುವ ಮೂಲಕ ವಾಲ್ಮೀಕಿ ರಾಮಾಯಣದಲ್ಲಿನ ಪ್ರಮುಖ ಕಥಾಭಾಗವೊಂದನ್ನು ಸಂಕ್ಷಿಪ್ತಗೊಳಿಸಿ, ಮುಂದಿನ ಕಥಾನಿರೂಪಣೆಗೆ ವೇಗ ನೀಡುತ್ತಾನೆ. ಅವನ ದೃಷ್ಟಿಯಲ್ಲಿ ರಾಮಕಥೆಗೆ ನಾರದನ ಉಪದೇಶಕ್ಕಿಂತಲೂ ಶಿವನ ವಚನವೇ ಪ್ರಧಾನವಾಗುತ್ತದೆ. ಜೊತೆಗೆ, ಕಥೆಯ ಆರಂಭದಲ್ಲಿಯೇ ಶಿವನ ಮೂಲಕ ರಾಮನ ಪರಬ್ರಹ್ಮತ್ವವನ್ನು ಪ್ರತಿಷ್ಠಾಪಿಸುವುದು, ಸಂಪೂರ್ಣ ಕಾವ್ಯವನ್ನು ಭಕ್ತಿಕೇಂದ್ರಿತ ಹಾಗೂ ತಾತ್ವಿಕವಾಗಿ ಏಕಸೂತ್ರದಲ್ಲಿ ಬಂಧಿಸುವ ಕಾರ್ಯವನ್ನು ಮಾಡುತ್ತದೆ.

ನಾರದಮುನಿಯಿಂದ ಶ್ರೀರಾಮನ ಕಥೆಯನ್ನು ಸಂಕ್ಷಿಪ್ತವಾಗಿ ಆಲಿಸಿದ ನಂತರ, ಬ್ರಹ್ಮನು ವಾಲ್ಮೀಕಿಯ ಆಶ್ರಮಕ್ಕೆ ಆಗಮಿಸಿ, ನಾರದನು ಹೇಳಿದ ರೀತಿಯಲ್ಲಿ ರಾಮಚರಿತೆಯನ್ನು ವಿರಚಿಸುವಂತೆ ಆಜ್ಞಾಪಿಸಿ ಅದೃಶ್ಯನಾಗುತ್ತಾನೆ. ಈ ದೈವಿಕ ಆದೇಶದ ಪರಿಣಾಮವಾಗಿ ವಾಲ್ಮೀಕಿಗೆ ಧ್ಯಾನಸ್ಥ ಸ್ಥಿತಿಯಲ್ಲಿ ಮನುವಂಶದ ಸಂಪೂರ್ಣ ಚರಿತ್ರೆಯೇ ಅಂಗೈಯಲ್ಲಿನ ನೆಲ್ಲಿಯಂತೆ ಸ್ಪಷ್ಟವಾಗಿ ಪ್ರತ್ಯಕ್ಷವಾಗುತ್ತಾ ಹೋಗುತ್ತದೆ. ಈ ದರ್ಶನಾತ್ಮಕ ಅನುಭವವೇ ವಾಲ್ಮೀಕಿಯನ್ನು ಶ್ರೀರಾಮನ ಸತ್ಕಥೆಯನ್ನು ರಚಿಸಲು ಪ್ರೇರೇಪಿಸುತ್ತದೆ. ವಾಲ್ಮೀಕಿ ರಾಮಾಯಣದಲ್ಲಿ ಈ ಪ್ರಸಂಗವು ಕಾವ್ಯರಚನೆಯ ದೈವಿಕ ಮೂಲವನ್ನು ಪ್ರತಿಷ್ಠಾಪಿಸುವ ಪ್ರಮುಖ ಸನ್ನಿವೇಶವಾಗಿದ್ದು, ಕವಿಯ ಋಷಿತ್ವ ಮತ್ತು ಕಾವ್ಯ ಪ್ರತಿಭೆಯ ನಡುವಿನ ಸಂಬಂಧವನ್ನು ಬಿಂಬಿಸುತ್ತದೆ. ವೆಂಕಾಮಾತ್ಯನು ಈ ಪ್ರಸಂಗವನ್ನು ಸಂಕ್ಷಿಪ್ತವಾಗಿ ಸೂಚಿಸಿದ ನಂತರ, ಕಥೆಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುತ್ತಾನೆ. ಬ್ರಹ್ಮನ ಆಜ್ಞೆ ಮತ್ತು ವಾಲ್ಮೀಕಿಯ ಧ್ಯಾನಾನುಭವದ ವಿವರಗಳನ್ನು ಹೆಚ್ಚು ವಿಸ್ತರಿಸದೆ, ದಶರಥನ ರಾಜ್ಯಭಾರದ ವರ್ಣನೆಯೊಂದಿಗೆ ನೇರವಾಗಿ ಕಥಾನಿರೂಪಣೆಯನ್ನು ಆರಂಭಿಸುತ್ತಾನೆ. ಇಲ್ಲಿ ವೆಂಕಾಮಾತ್ಯನ ಕಥನಶೈಲಿಯ ಪ್ರಮುಖ ಲಕ್ಷಣವೊಂದು ಗೋಚರಿಸುತ್ತದೆ. ಅಂದರೆ, ವಾಲ್ಮೀಕಿ ರಾಮಾಯಣದಲ್ಲಿ ವಿಸ್ತಾರವಾಗಿ ನಿರೂಪಿತವಾಗಿರುವ ಕೆಲವು ಪೂರ್ವಭಾವಿ ಸನ್ನಿವೇಶಗಳನ್ನು ಸಂಕ್ಷಿಪ್ತಗೊಳಿಸಿ, ಕಥೆಯ ಪ್ರಧಾನ ಘಟನಾವಳಿಗಳತ್ತ ತಕ್ಷಣ ಗಮನ ಹರಿಸುವ ಪ್ರವೃತ್ತಿ. ಈ ಅಂಶವನ್ನು ವಾಲ್ಮೀಕಿ ರಾಮಾಯಣದೊಂದಿಗೆ ಹೋಲಿಸಿದರೆ ಸ್ಪಷ್ಟವಾದ ವ್ಯತ್ಯಾಸ ಗೋಚರಿಸುತ್ತದೆ. ವಾಲ್ಮೀಕಿ ರಾಮಾಯಣದ ಬಾಲಕಾಂಡದ ಮೂರನೇ ಸರ್ಗದಲ್ಲಿ, ವಾಲ್ಮೀಕಿಯಲ್ಲಿ ಮೂಡಿದ ರಾಮಾಯಣದ ಸ್ವರೂಪವನ್ನು ವಿವರಿಸುವ ಸಂದರ್ಭದಲ್ಲೇ ಸಂಪೂರ್ಣ ರಾಮಾಯಣದ ಕಥಾಸಾರಾಂಶವನ್ನು ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ. ಇದು ಬಾಲಕಾಂಡದ ಮೂರನೇ ಸರ್ಗದ ಪೂರ್ಣ ಭಾಗವನ್ನು ಆವರಿಸಿಕೊಂಡಿದ್ದು, ರಾಮಾಯಣದ ಎಲ್ಲ ಪ್ರಮುಖ ಪ್ರಸಂಗಗಳನ್ನು ಕ್ರಮಬದ್ಧವಾಗಿ ಸೂಚಿಸುತ್ತದೆ. ಅಲ್ಲದೆ, ವಾಲ್ಮೀಕಿ ರಾಮಾಯಣದಲ್ಲಿ ಬರುವ ಎಲ್ಲ ಪ್ರಸಂಗಗಳನ್ನು ಸಂಕ್ಷಿಪ್ತವಾಗಿ ಹೇಳಿ ಕವಿಯು ರಾಮಚರಿತ್ರೆಯನ್ನು ಪೂರ್ಣಗೊಳಿಸಿದನೆಂದು ಹೇಳಲಾಗಿದೆ. ಈ ಕಥಾಸಾರಾಂಶವು ಓದುಗರಿಗೆ ಮುಂದಿನ ಕಥೆಯ ಪೂರ್ವಸೂಚನೆ ನೀಡುವ ಕಾರ್ಯವನ್ನು ಮಾಡುತ್ತದೆ. ಆದರೆ ವೆಂಕಾಮಾತ್ಯ ರಾಮಾಯಣದಲ್ಲಿ ಈ ರೀತಿಯ ಪುನರಾವರ್ತನೆ ಕಾಣಿಸುವುದಿಲ್ಲ. ಕವಿ ಈಗಾಗಲೇ ಶಿವ–ಪಾರ್ವತಿ ಸಂವಾದದ ಮೂಲಕ ರಾಮಾಯಣದ ಸಂಕ್ಷಿಪ್ತ ರೂಪವನ್ನು

ನಿರೂಪಿಸಿದ್ದರಿಂದ, ಮತ್ತೊಮ್ಮೆ ವಿಸ್ತೃತ ಕಥಾಸಾರಾಂಶವನ್ನು ನೀಡಬೇಕಾದ ಅಗತ್ಯವಿಲ್ಲವೆಂದು ಭಾವಿಸಿದಂತೆ ತೋರುತ್ತದೆ. ಹೀಗಾಗಿ ವಾಲ್ಮೀಕಿ ರಾಮಾಯಣದಲ್ಲಿ ಮೂರನೇ ಸರ್ಗದಲ್ಲಿ ಕಾಣುವ ಕಥಾಸಾರಾಂಶವನ್ನು ವೆಂಕಾಮಾತ್ಯನು ಉದ್ದೇಶಪೂರ್ವಕವಾಗಿ ಬಿಟ್ಟು, ದಶರಥನ ರಾಜ್ಯಭಾರದಿಂದಲೇ ಕಥೆಗೆ ಪ್ರವೇಶಿಸುತ್ತಾನೆ. ಅವನ ದೃಷ್ಟಿಯಲ್ಲಿ ಪೂರ್ವಭಾವಿ ಸನ್ನಿವೇಶಗಳಿಗಿಂತ ರಾಮನ ಅವತಾರಕ್ಕೆ ನೆಲೆ ಸಿದ್ಧವಾಗುವ ಸಾಮಾಜಿಕ–ರಾಜಕೀಯ ಹಿನ್ನಲೆಯೇ ಮುಖ್ಯವಾಗುತ್ತದೆ. ಆದ್ದರಿಂದ ದಶರಥನ ಧರ್ಮನಿಷ್ಠ ರಾಜ್ಯಭಾರದ ವರ್ಣನೆಯ ಮೂಲಕ ರಾಮನ ಅವತಾರಕ್ಕೆ ಅಗತ್ಯವಾದ ಭೂಮಿಕೆಯನ್ನು ನಿರ್ಮಿಸುವತ್ತ ಕವಿ ಗಮನ ಹರಿಸುತ್ತಾನೆ.

ವಾಲ್ಮೀಕಿಯು ತಾನು ರಚಿಸಿದ ರಾಮಾಯಣ ಕಾವ್ಯವನ್ನು ಹಾಡಲು ಲವ ಮತ್ತು ಕುಶರೇ ಸಮರ್ಥರು ಎಂದು ನಿರ್ಧರಿಸುವುದು, ಲವಕುಶರು ರಾಮಾಯಣವನ್ನು ಸಂಪೂರ್ಣವಾಗಿ ಬಾಯಿಪಾಠ ಮಾಡಿ ಋಷಿಗಳು, ಬ್ರಾಹ್ಮಣರು, ಸಾಧುಗಳು ಮೊದಲಾದವರು ನೆರೆದ ಮಹಾಸಭೆಯಲ್ಲಿ ಅದನ್ನು ಗಾಯನ ರೂಪದಲ್ಲಿ ಪ್ರಸ್ತುತಪಡಿಸುವುದು ಹಾಗೂ ಅಯೋಧ್ಯೆಯ ರಾಜಮಾರ್ಗಗಳಲ್ಲೂ, ಸಣ್ಣಸಣ್ಣ ಬೀದಿಗಳಲ್ಲೂ ಹಾಡುತ್ತ ಅರಮನೆಗೆ ಪ್ರವೇಶಿಸಿ ಕೊನೆಗೆ ರಾಮನ ಸಮಕ್ಷಮದಲ್ಲಿಯೇ ರಾಮಾಯಣವನ್ನು ಹಾಡುವ ಪ್ರಸಂಗಗಳು ವೆಂಕಾಮಾತ್ಯ ರಾಮಾಯಣದಲ್ಲಿ ಕಾಣಿಸುವುದಿಲ್ಲ. ವೆಂಕಾಮಾತ್ಯನು ದಶರಥನ ಮನಸ್ಥಿತಿಯನ್ನು ವಿಶಿಷ್ಟ ಮಾನಸಿಕ ಆಯಾಮದೊಂದಿಗೆ ಚಿತ್ರಿಸುತ್ತಾನೆ. ದಶರಥನು ವೈಭವ ಮತ್ತು ಧರ್ಮನಿಷ್ಠತೆಯಿಂದ ಧರೆಯನ್ನು ಸಮರ್ಥವಾಗಿ ಪಾಲಿಸುತ್ತಿರುವ ಸಂದರ್ಭದಲ್ಲಿ, ಒಂದು ದಿನ ತನ್ನ ಮಂದಿರದ ಕನ್ನಡಿಯಲ್ಲಿ ನೋಡಿದಾಗ ಕೂದಲಲ್ಲಿ ಕಾಣಿಸಿದ ನರೆಯು ಅವನನ್ನು ಕಾಡುತ್ತದೆ. ದಶರಥನು ಅರವತ್ತು ಸಾವಿರ ವರ್ಷಗಳ ಕಾಲ ತನ್ನ ರಾಜ್ಯವನ್ನು ಧರ್ಮಪೂರ್ವಕವಾಗಿ ಪರಿಪಾಲಿಸಿ, ಅನೇಕ ಕಷ್ಟಗಳನ್ನು ಎದುರಿಸಿ ಗಳಿಸಿದ ಐಶ್ವರ್ಯವನ್ನು ಮುಂದಿನ ತಲೆಮಾರಿಗೆ ಹಸ್ತಾಂತರಿಸಬೇಕೆಂಬ ಆಕಾಂಕ್ಷೆಯನ್ನು ಹೊಂದಿದ್ದಾನೆ. ಆದರೆ ಆ ಐಶ್ವರ್ಯಕ್ಕೆ ಉತ್ತರಾಧಿಕಾರಿಗಳಾಗುವ ಮಕ್ಕಳ ಮುಖಗಳನ್ನು ನೋಡಿ ಸುಖಪಡುವ ಅವಕಾಶ ಅವನಿಗೆ ಲಭಿಸದೆ ಹೋಗಿರುವುದೇ ಅವನ ದುಃಖದ ಮೂಲವಾಗುತ್ತದೆ. ವಾಲ್ಮೀಕಿ ರಾಮಾಯಣದಲ್ಲಿ ದಶರಥನ ದುಃಖವು ಪ್ರಧಾನವಾಗಿ ರಾಜವಂಶ ಮುಂದುವರಿಯಬೇಕೆಂಬ ಧರ್ಮಬೋಧದಿಂದ ಪ್ರೇರಿತವಾಗಿದ್ದು, ವೈಯಕ್ತಿಕ ವೃದ್ಧಾಪ್ಯಬಾಧೆ ಅಥವಾ ಅಸ್ತಿತ್ವ ಸಂಕಟವು ಅಷ್ಟಾಗಿ ಮುನ್ನೆಲೆಗೆ ಬರುವುದಿಲ್ಲ. ಆದರೆ ವೆಂಕಾಮಾತ್ಯನ ಚಿತ್ರಣದಲ್ಲಿ ದಶರಥನ ದುಃಖವು ಹೆಚ್ಚು ಆಂತರಿಕ ಮತ್ತು ವೈಯಕ್ತಿಕ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಕನ್ನಡಿಯಲ್ಲಿ ನರೆಯ ದರ್ಶನದಿಂದ ಆರಂಭವಾಗುವ ಈ ಮನೋವ್ಯಥೆ, ಅವನ ಜೀವನದ ಸಂಧ್ಯಾಕಾಲದ ಅರಿವಿಗೆ ಕಾರಣವಾಗುತ್ತದೆ.

ಪುತ್ರಕಾಮೇಷ್ಟಿಯ ಯಾಗ ಸಫಲವಾದ ನಂತರ ಪಾಯಸ ವಿತರಣೆ ಕುರಿತು ವಾಲ್ಮೀಕಿ ರಾಮಾಯಣ ಮತ್ತು ವೆಂಕಾಮಾತ್ಯ ರಾಮಾಯಣಗಳಲ್ಲಿರುವ ನಿರೂಪಣಾ

ವ್ಯತ್ಯಾಸಗಳು ಕಾವ್ಯಗಳ ದೃಷ್ಟಿಕೋನ ಹಾಗೂ ಕವಿಗಳ ಸೃಜನಶೀಲ ಸ್ವಾತಂತ್ರ್ಯವನ್ನು ಸ್ಪಷ್ಟವಾಗಿ ತೋರಿಸುತ್ತವೆ. ಪುತ್ರಕಾಮೇಷ್ಟಿಯ ಯಾಗ ಪೂರ್ಣಗೊಂಡಾಗ ಯಜ್ಞಕುಂಡದಿಂದ ದಿವ್ಯಪುರುಷನೊಬ್ಬನು ಉದ್ಭವಿಸಿ ದಶರಥನಿಗೆ ಪಾಯಸವನ್ನು ನೀಡುತ್ತಾನೆ. ವೆಂಕಾಮಾತ್ಯ ರಾಮಾಯಣದಲ್ಲಿ ದಶರಥನು ಆ ಪಾಯಸದ ಅರ್ಧ ಭಾಗವನ್ನು ಹಿರಿಯ ರಾಣಿಯಾದ ಕೌಸಲ್ಯೆಗೆ ನೀಡುತ್ತಾನೆ. ಉಳಿದ ಅರ್ಧವನ್ನು ತನ್ನ ಕೊನೆಯ ಹೆಂಡತಿಯಾದ ಕೈಕೇಯಿಗೆ ನೀಡಿದ ನಂತರ, ಸುಮಿತ್ರೆಯನ್ನು ನೆನೆದು ಅವನ ಮನಸ್ಸು ಚಿಂತೆಗೆ ಒಳಗಾಗುತ್ತದೆ. ಆಗ ಕೌಸಲ್ಯೆಯೂ ಕೈಕೇಯಿಯೂ ತಮ್ಮ ತಮ್ಮ ಪಾಲಿಗೆ ಬಂದ ಪಾಯಸದ ಅರ್ಧರ್ಧ ಭಾಗವನ್ನು ಸುಮಿತ್ರೆಗೆ ನೀಡುತ್ತಾರೆ ಎಂದು ವೆಂಕಾಮಾತ್ಯ ವಿವರಿಸುತ್ತಾನೆ. ಇದಕ್ಕೆ ವಿರುದ್ಧವಾಗಿ, ವಾಲ್ಮೀಕಿ ರಾಮಾಯಣದಲ್ಲಿ ಪಾಯಸ ವಿತರಣೆಯು ಅತ್ಯಂತ ನಿಷ್ಪಕ್ಷಪಾತವಾಗಿ ನಡೆಯುತ್ತದೆ. ದಶರಥನು ಮೊದಲಿಗೆ ಪಾಯಸದ ಅರ್ಧಭಾಗವನ್ನು ಕೌಸಲ್ಯಾದೇವಿಗೆ ನೀಡುತ್ತಾನೆ. ಉಳಿದ ಅರ್ಧದಲ್ಲಿ ಅರ್ಧಭಾಗವನ್ನು ಸುಮಿತ್ರಾದೇವಿಗೆ ಕೊಡುತ್ತಾನೆ. ಇನ್ನೂ ಉಳಿದ ಚತುರ್ಥಾಂಶವನ್ನು ಎರಡು ಸಮಭಾಗಗಳಾಗಿ ವಿಭಜಿಸಿ, ಒಂದು ಭಾಗವನ್ನು ಕೈಕೇಯಿಗೂ ಮತ್ತೊಂದು ಭಾಗವನ್ನು ಮತ್ತೆ ಸುಮಿತ್ರಾದೇವಿಗೂ ನೀಡುತ್ತಾನೆ. ಈ ಮೂಲಕ ಸುಮಿತ್ರೆಗೆ ಎರಡು ಬಾರಿ ಪಾಯಸ ದೊರೆಯುವಂತೆ ಮಾಡುತ್ತಾನೆ. ವೆಂಕಾಮಾತ್ಯನ ನಿರೂಪಣೆ ವಾಲ್ಮೀಕಿಗಿಂತ ಭಿನ್ನವಾಗಿರುವುದಷ್ಟೇ ಅಲ್ಲ, ಅದು ಭೋಜನು ರಚಿಸಿದ ಚಂಪೂ ರಾಮಾಯಣದ ವಿವರಣೆಯೊಂದಿಗೆ ಹೆಚ್ಚು ಹೊಂದಾಣಿಕೆಯನ್ನು ಹೊಂದಿದೆ.

ಶ್ರೀರಾಮನು ಮಹಾರೂಪದಲ್ಲಿ ಜನಿಸಿದಾಗ ಕೌಸಲ್ಯೆ ಆ ದಿವ್ಯ ಶಿಶುವಿನ ವೈಭವವನ್ನು ನೋಡಿ ವಿಸ್ಮಯಗೊಂಡು, ಕ್ಷಣಮಾತ್ರದಲ್ಲಿ ತಾಯಿಯ ಪಾತ್ರವನ್ನು ಮರೆತು ಭಕ್ತೆಯ ಭಾವವನ್ನು ತಾಳುತ್ತಾಳೆ ಎಂದು ವೆಂಕಾಮಾತ್ಯ ವರ್ಣಿಸುತ್ತಾನೆ. ಆಕೆ ಶ್ರೀರಾಮನ ಮಹಿಮೆಯನ್ನು ಅರಿತು, ನಿನ್ನ ಲಾಲನೆ–ಪಾಲನೆಗಳನ್ನು ಮಾಡಿ ಈ ಸಂಸಾರ ಸಾಗರದ ದಡವನ್ನು ಕಾಣುವೆನೆಂದು ಪ್ರಾರ್ಥಿಸುತ್ತಾಳೆ. ಇಲ್ಲಿ ತಾಯಿ–ಮಗನ ಸಂಬಂಧ ಭಕ್ತ–ಭಗವಂತನ ಸಂಬಂಧವಾಗಿ ಪರಿವರ್ತಿತವಾಗುತ್ತದೆ. ಈ ರೀತಿಯ ಭಾವನಾತ್ಮಕ ಮತ್ತು ತಾತ್ವಿಕ ವಿಸ್ತಾರ ವಾಲ್ಮೀಕಿ ರಾಮಾಯಣದಲ್ಲಿ ಕಾಣುವುದಿಲ್ಲ; ಅಲ್ಲಿ ಕೌಸಲ್ಯೆಯು ಪ್ರಧಾನವಾಗಿ ತಾಯಿಯಾಗಿ ಮಾತ್ರ ಚಿತ್ರಿತಳಾಗುತ್ತಾಳೆ. ವಾಲ್ಮೀಕಿ ರಾಮಾಯಣದಲ್ಲಿ ರಾಮನು ಕ್ರಮೇಣ ತನ್ನ ದೈವತ್ವವನ್ನು ವ್ಯಕ್ತಪಡಿಸುವ ಮಾನುಷ ನಾಯಕನಾಗಿ ಕಾಣಿಸಿಕೊಂಡರೆ, ವೆಂಕಾಮಾತ್ಯ ರಾಮಾಯಣದಲ್ಲಿ ಅವನು ಜನನ ಕ್ಷಣದಿಂದಲೇ ವಿಷ್ಣುವಿನ ಅವತಾರವೆಂದು ಸ್ಥಾಪಿತನಾಗುತ್ತಾನೆ.

ವಿಶ್ವಾಮಿತ್ರನ ಅಯೋಧ್ಯಾಗಮನ ಮತ್ತು ರಾಮನನ್ನು ಯಾಗರಕ್ಷಣೆಗೆ ಕರೆದೊಯ್ಯುವ ಪ್ರಸಂಗವನ್ನು ನಿರೂಪಿಸುವಲ್ಲಿ ವೆಂಕಾಮಾತ್ಯ ರಾಮಾಯಣ ಮತ್ತು ವಾಲ್ಮೀಕಿ ರಾಮಾಯಣಗಳ ನಡುವೆ ತಾತ್ವಿಕ ಹಾಗೂ ಭಾವನಾತ್ಮಕ ವ್ಯತ್ಯಾಸಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ವೆಂಕಾಮಾತ್ಯ ರಾಮಾಯಣದಲ್ಲಿ ವಿಶ್ವಾಮಿತ್ರನು ಅಯೋಧ್ಯೆಗೆ ಬಂದು ದಶರಥನ ಮುಂದೆ ತನ್ನ ಯಾಗವನ್ನು ರಾಕ್ಷಸರಿಂದ ರಕ್ಷಿಸಲು

ನೆರವು ಕೋರುವಾಗ, ತನ್ನ ಬೇಡಿಕೆಗೆ ಗಾಢವಾದ ದೈವಿಕ ತಾತ್ಪರ್ಯವನ್ನು ಸೇರಿಸುತ್ತಾನೆ. ಸಾಧುಜನರ ರಕ್ಷಣೆಗಾಗಿ ಶ್ರೀಮನ್ನಾರಾಯಣನೇ ದಶರಥನ ಪುತ್ರನಾಗಿ ಅವತರಿಸಿದ್ದಾನೆ ಎಂದು ವಿಶ್ವಾಮಿತ್ರನು ಸ್ಪಷ್ಟವಾಗಿ ಹೇಳುತ್ತಾನೆ. ವಾಲ್ಮೀಕಿ ರಾಮಾಯಣದಲ್ಲಿ ವಿಶ್ವಾಮಿತ್ರನ ವಿನಂತಿ ಹೆಚ್ಚು ಸಂಯಮಿತ ಹಾಗೂ ಮಾನವೀಯ ನೆಲೆಯಲ್ಲಿ ರೂಪುಗೊಂಡಿದೆ. ಅಲ್ಲಿ ವಿಶ್ವಾಮಿತ್ರನು ದಶರಥನಿಗೆ, ರಾಮನು ಮಹಾತ್ಮನೂ ಸತ್ಯಪರಾಕ್ರಮವುಳ್ಳವನೂ ಆಗಿದ್ದಾನೆ ಎಂಬ ವಿಚಾರವನ್ನು ನಾನು ಬಲ್ಲೆ ಎಂದು ಮಾತ್ರ ಹೇಳುತ್ತಾನೆ. ಜೊತೆಗೆ ವಸಿಷ್ಠರು ಮತ್ತು ಇತರ ತಪೋನಿಷ್ಠ ಋಷಿಗಳೂ ಸಹ ರಾಮನ ಮಹತ್ವವನ್ನು ಅರಿತಿದ್ದಾರೆ ಎಂದು ಸೂಚಿಸುತ್ತಾನೆ. ಆದರೆ ರಾಮನನ್ನು ಸ್ಪಷ್ಟವಾಗಿ ವಿಷ್ಣುವಿನ ಅವತಾರನೆಂದು ಘೋಷಿಸುವುದಿಲ್ಲ.

ಅಹಲ್ಯಾ ವೃತ್ತಾಂತವನ್ನು ನಿರೂಪಿಸುವಲ್ಲಿ ವೆಂಕಾಮಾತ್ಯ ರಾಮಾಯಣ ಮತ್ತು ವಾಲ್ಮೀಕಿ ರಾಮಾಯಣಗಳ ನಡುವಿನ ವ್ಯತ್ಯಾಸಗಳು ಕಥಾವಿಸ್ತಾರ, ಪುರಾಣ ಪರಂಪರೆಯ ಅನುಸರಣೆ ಮತ್ತು ಕವಿಯ ಸೃಜನಶೀಲ ದೃಷ್ಟಿಕೋನವನ್ನು ಸ್ಪಷ್ಟವಾಗಿ ತೋರಿಸುತ್ತವೆ. ಒಂದೇ ಪ್ರಸಂಗವನ್ನು ಆಧಾರವಾಗಿಸಿಕೊಂಡರೂ, ಶಾಪದ ಸ್ವರೂಪ, ಅವಧಿ, ಅಹಲ್ಯೆಯ ಸ್ಥಿತಿ ಮತ್ತು ಶಾಪವಿಮೋಚನೆಯ ಕ್ರಮಗಳಲ್ಲಿ ಎರಡೂ ಕಾವ್ಯಗಳು ಭಿನ್ನ ಮಾರ್ಗಗಳನ್ನು ಅನುಸರಿಸುತ್ತವೆ. ವಾಲ್ಮೀಕಿ ರಾಮಾಯಣದಲ್ಲಿ ಗೌತಮನು ಅಹಲ್ಯೆಗೆ ''ವಾಯುಭಕ್ಷಾ ನಿರಾಹಾರಾ ತಪ್ಯಂತೀ ಭಸ್ಮಶಾಯಿನೀ'' ಎಂದು ಶಪಿಸಿದನೆಂದು ಹೇಳಲಾಗಿದೆ. ಅಂದರೆ ಅಹಲ್ಯೆ ಭಸ್ಮಶಾಯಿನಿಯಾಗಿ, ಆಹಾರವಿಲ್ಲದೆ ತಪಸ್ಸು ಮಾಡುತ್ತ, ಎಲ್ಲರಿಗೂ ಅದೃಶ್ಯಳಾಗಿ ಇರುವಂತೆಯೇ ಶಾಪವನ್ನು ಪಡೆಯುತ್ತಾಳೆ. ಇಲ್ಲಿ ಅಹಲ್ಯೆಯ ಸ್ಥಿತಿ ಮಾನವಾಕೃತಿಯಲ್ಲಿಯೇ ಉಳಿದಿದ್ದು, ಅವಳು ಕಠೋರ ತಪಸ್ಸಿನ ಮೂಲಕ ತನ್ನ ಪಾಪಕ್ಷಯವನ್ನು ಅನುಭವಿಸುವುದೇ ಶಾಪದ ತಾತ್ಪರ್ಯವಾಗಿದೆ. ವೆಂಕಾಮಾತ್ಯ ರಾಮಾಯಣದಲ್ಲಿ ಗೌತಮನು ಅಹಲ್ಯೆಗೆ ನೀಡಿದ ಶಾಪವು ಹೆಚ್ಚು ತೀವ್ರ ಮತ್ತು ದೈಹಿಕ ರೂಪಾಂತರವನ್ನು ಒಳಗೊಂಡಿದೆ. ''ಪತ್ತುಸಾವಿರ ವರುಷ ಪಾಷಾಣರೂಪಿನಿಂ ತುತ್ತುನುಳಿದತಿಶೀತಘರ್ಮಬಾಧೆಯ ತಾಳ್ದು ಬಿತ್ತರದಲಶ್ಮಶಾಯಿನಿಯಾಗಿ ತಪದಲಿರೆ ಸಪ್ತಾಶ್ವವಂಶನೃಪರ ಉತ್ತಮಶ್ರೀರಾಮಚಂದ್ರನೈತರೆ ಪಾದ ದೊತ್ತಿನ ರಜಃಸ್ಪರ್ಶಮಾಗಲಘರಾಶಿಗಳ ಮೊತ್ತಂಗಳೋಡಿ ಪೂತಾಂಗಳಹೆ ಪೋಗೆಂದು''[3] ಶಪಿಸಿದನೆಂದು ವೆಂಕಾಮಾತ್ಯನು ಹೇಳುತ್ತಾನೆ. ''ಪಾಷಾಣರೂಪಿನಿಂ'' ಎಂಬ ಪದಪ್ರಯೋಗವು ಪುರಾಣೋಕ್ತ ಪರಂಪರೆಯನ್ನು ಸ್ಪಷ್ಟವಾಗಿ ಅನುಸರಿಸುತ್ತದೆ. ಇಲ್ಲಿ ಅಹಲ್ಯೆ ಸಂಪೂರ್ಣವಾಗಿ ಮಾನವ ರೂಪವನ್ನು ಕಳೆದುಕೊಂಡು, ಜಡವಾದ ಕಲ್ಲಿನ ರೂಪದಲ್ಲಿ ಶಾಪವನ್ನು ಅನುಭವಿಸುವುದು ಅವಳ ದುರಂತದ ತೀವ್ರತೆಯನ್ನು ಹೆಚ್ಚಾಗಿ ತೋರಿಸುತ್ತದೆ. ಈ ಅಹಲ್ಯಾ ವೃತ್ತಾಂತವು ವೆಂಕಾಮಾತ್ಯ ರಾಮಾಯಣದಲ್ಲಿ ವಾಲ್ಮೀಕಿಗಿಂತ ಬಹಳ ವಿಸ್ತಾರಗೊಂಡಿದೆ. ಕವಿ ಈ ಕಥಾಭಾಗವನ್ನು ರಾಮಾಯಣ ಪರಂಪರೆಯ ಜೊತೆಗೆ ಇತರ ಪೌರಾಣಿಕ ಮೂಲಗಳನ್ನೂ ಆಧರಿಸಿ ವಿಸ್ತರಿಸಿದ್ದಾನೆ. ಹದಿನೈದನೇ ಸಂಧಿಯ ಐವತ್ತೈದನೇ ಪದ್ಯದಲ್ಲಿ ''ಶತಮನ್ಯುಕೃತಚರಿತ್ರೆಯನಹಲ್ಯೆಯು ಶಾಪಹತಕಳಾದೆಲ್ಲ

ವೃತ್ತಾಂತಮಂ ವಿಸ್ತರಿಸಿ ಯತಿಚಕ್ರವರ್ತಿ ಪೇಳಿದ" ಎಂದು ಹೇಳಿರುವುದು, ಶತಮನ್ಯು ಅಂದರೆ ದೇವೇಂದ್ರನಿಂದ ರಚಿತವಾದ ಅಹಲ್ಯಾಚರಿತ್ರೆಯನ್ನು ಆಧಾರವಾಗಿ ಕವಿ ಈ ಕಥೆಯನ್ನು ವಿಸ್ತರಿಸಿದ್ದಾನೆ ಎಂಬುದಕ್ಕೆ ಸ್ಪಷ್ಟವಾದ ಆಧಾರವನ್ನು ಒದಗಿಸುತ್ತದೆ. ಶಾಪವಿಮೋಚನೆಯ ಪ್ರಸಂಗದಲ್ಲಿಯೂ ಎರಡು ಕಾವ್ಯಗಳ ನಡುವೆ ಸ್ಪಷ್ಟ ವ್ಯತ್ಯಾಸವಿದೆ. ವೆಂಕಾಮಾತ್ಯ ರಾಮಾಯಣದಲ್ಲಿ ರಾಮನ ಪಾದಧೂಳಿ ಅಹಲ್ಯೆಯ ಮೇಲೆ ತಾಕಿದ ಕ್ಷಣದಲ್ಲೇ, ಕಲ್ಲಿನ ರೂಪದಲ್ಲಿ ಬಿದ್ದಿದ್ದ ಅವಳ ಶಾಪವು ಸರಿದು, ಅವಳು ಮನುಷ್ಯಾಕೃತಿಯನ್ನು ಪಡೆದು ನಿಂತಳು ಎಂದು ವರ್ಣಿಸಲಾಗಿದೆ. ವಾಲ್ಮೀಕಿ ರಾಮಾಯಣದಲ್ಲಿ ರಾಮನು ವಿಶ್ವಾಮಿತ್ರ ಮತ್ತು ಲಕ್ಷ್ಮಣರೊಡನೆ ಗೌತಮಾಶ್ರಮವನ್ನು ಪ್ರವೇಶಿಸಿದ ಕ್ಷಣದಲ್ಲಿಯೇ ಅಹಲ್ಯೆ ಎಲ್ಲರಿಗೂ ಗೋಚರವಾಗುತ್ತಾಳೆ. ರಾಮನ ಪಾದಸ್ಪರ್ಶ ಅಥವಾ ಪಾದಧೂಳಿಗೆ ವಿಶೇಷವಾದ ಕ್ರಿಯಾತ್ಮಕ ಪಾತ್ರ ಇಲ್ಲ; ಅವನ ಆಗಮನವೇ ಶಾಪವಿಮೋಚನೆಯ ಸಂಕೇತವಾಗುತ್ತದೆ.

ಮಿಥಿಲೆಯಲ್ಲಿ ನಡೆಯುವ ಸೀತಾಸ್ವಯಂವರ ಪ್ರಸಂಗವನ್ನು ನಿರೂಪಿಸುವಲ್ಲಿ ವೆಂಕಾಮಾತ್ಯ ರಾಮಾಯಣ ಮತ್ತು ವಾಲ್ಮೀಕಿ ರಾಮಾಯಣಗಳ ನಡುವಿನ ವ್ಯತ್ಯಾಸವು ಜನಕನ ಮನೋಭಾವ, ರಾಮನ ದೈವತ್ವದ ಸ್ವೀಕಾರ ಮತ್ತು ಸ್ವಯಂವರದ ತಾತ್ವಿಕ ಅರ್ಥವನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಒಂದೇ ಘಟನೆಗೆ ಸಂಬಂಧಿಸಿದರೂ, ನಿರ್ಧಾರದ ಕಾಲ ಮತ್ತು ಕಾರಣಗಳಲ್ಲಿ ಕಂಡುಬರುವ ಈ ಭೇದವು ಎರಡು ಕಾವ್ಯಗಳ ಧಾರ್ಮಿಕ ದೃಷ್ಟಿಕೋನವನ್ನು ಬೆಳಗಿಸುತ್ತದೆ. ವೆಂಕಾಮಾತ್ಯ ರಾಮಾಯಣದಲ್ಲಿ ವಿಶ್ವಾಮಿತ್ರನು ರಾಮಲಕ್ಷ್ಮಣರೊಡನೆ ಮಿಥಿಲೆಗೆ ಆಗಮಿಸಿದ ಕ್ಷಣದಲ್ಲಿಯೇ ಜನಕನು ಆಂತರಿಕವಾಗಿ ಮಹತ್ವದ ನಿರ್ಧಾರವನ್ನು ಕೈಗೊಳ್ಳುತ್ತಾನೆ. ಜಗದೀಶನೇ ರಾಮನಾಗಿ ಅವತರಿಸಿ ಬಂದಿರುವನು ಎಂಬ ಸತ್ಯವನ್ನು ಅವನು ಅರಿತಿರುವುದರಿಂದ, ಶಿವಧನುಸ್ಸಿನ ಪರೀಕ್ಷೆ ಕೇವಲ ಲೋಕೋಪಚಾರದ ಅಂಗವಾಗಿ ಮಾತ್ರ ಉಳಿಯುತ್ತದೆ. ವಾಲ್ಮೀಕಿ ರಾಮಾಯಣದಲ್ಲಿ ಜನಕ ಮಹಾರಾಜನ ನಿರ್ಧಾರವು ಹೆಚ್ಚು ವಿಧಿಬದ್ಧ ಮತ್ತು ಲೋಕಸಮ್ಮತ ರೀತಿಯಲ್ಲಿ ರೂಪುಗೊಂಡಿದೆ. ಅಲ್ಲಿ ಜನಕನು ಶಿವಧನುಸ್ಸಿನ ಇತಿಹಾಸ ಮತ್ತು ಅದರ ಅಪ್ರತಿಮ ಭಾರವನ್ನು ಸಭೆಯಲ್ಲಿ ವಿವರಿಸಿದ ನಂತರ, ಯಾರು ಆ ಧನುಸ್ಸಿಗೆ ಹೆದೆಯೇರಿಸಲು ಸಮರ್ಥರಾಗುವರೋ ಅವರಿಗೆ ಸೀತೆಯನ್ನು ಕೊಡುವೆನು ಎಂದು ಘೋಷಿಸುತ್ತಾನೆ. ರಾಮನು ಈ ಪರೀಕ್ಷೆಯಲ್ಲಿ ಯಶಸ್ವಿಯಾದ ನಂತರ ಮಾತ್ರ ಸೀತೆಯ ವಿವಾಹದ ನಿರ್ಧಾರ ಕೈಗೊಳ್ಳಲಾಗುತ್ತದೆ. ಇಲ್ಲಿ ರಾಮನ ದೈವತ್ವವನ್ನು ಜನಕನು ಮೊದಲೇ ಸಂಪೂರ್ಣವಾಗಿ ಅಂಗೀಕರಿಸಿದನೆಂಬ ಸೂಚನೆ ಇಲ್ಲ; ಸ್ವಯಂವರವು ರಾಜಧರ್ಮ ಮತ್ತು ಸಾಮಾಜಿಕ ನಿಯಮಗಳ ಅನುಸರಣೆಯಾಗಿ ನಡೆಯುತ್ತದೆ. ವೆಂಕಾಮಾತ್ಯ ರಾಮಾಯಣದಲ್ಲಿ ಸ್ವಯಂವರವು ಫಲಿತಾಂಶದ ಪರೀಕ್ಷೆಯಾಗದೆ, ರಾಮನ ದೈವಿಕ ಸ್ವರೂಪವನ್ನು ಲೋಕಕ್ಕೆ ಪ್ರಕಟಿಸುವ ಒಂದು ಔಪಚಾರಿಕ ಕ್ರಮವಾಗುತ್ತದೆ.

ವೆಂಕಾಮಾತ್ಯ ರಾಮಾಯಣದಲ್ಲಿ ಜನಕನು ಸೀತಾದೇವಿಯ ಮದುವೆ ಮಾಡುವನೆಂಬ ವಾರ್ತೆಯನ್ನು ಕೇಳಿದ ಕೂಡಲೆ ರಾವಣ, ಕುಂಭಕರ್ಣ ಮುಂತಾದ

ದಾನವರು ಮಿಥಿಲೆಗೆ ಆಗಮಿಸುತ್ತಾರೆ. ಇದರಿಂದಲೇ ಸ್ವಯಂವರವು ತ್ರೈಲೋಕ್ಯವ್ಯಾಪ್ತವಾದ ಮಹಾಸಭೆಯಾಗಿ ರೂಪುಗೊಳ್ಳುತ್ತದೆ. ರಾವಣನು ಶಿವಧನುಸ್ಸನ್ನು ಎತ್ತಲು ಪ್ರಯತ್ನಿಸಿ ವಿಫಲನಾಗುವ ಮೂಲಕ ಅವನ ಅಹಂಕಾರಕ್ಕೆ ಮೊದಲೇ ಭಂಗ ಉಂಟಾಗುತ್ತದೆ. ಈ ಘಟನೆಯ ಮೂಲಕ ವೆಂಕಾಮಾತ್ಯನು ರಾವಣನ ಶಕ್ತಿಯನ್ನು ಕುಗ್ಗಿಸಿ, ರಾಮನ ಪರಮಾಧಿಕಾರವನ್ನು ಪೂರ್ವಸೂಚನೆಯಾಗಿ ಸ್ಥಾಪಿಸುತ್ತಾನೆ. ವಾಲ್ಮೀಕಿ ರಾಮಾಯಣದಲ್ಲಿ ರಾವಣನ ಮಿಥಿಲಾಗಮನ ಅಥವಾ ಧನುಸ್ಸು ಎತ್ತುವ ಪ್ರಯತ್ನದ ಯಾವುದೇ ಉಲ್ಲೇಖವಿಲ್ಲ. ಇನ್ನೂ ಮುಂದೆ, ವೆಂಕಾಮಾತ್ಯ ರಾಮಾಯಣದಲ್ಲಿ ಸಾಕ್ಷಾತ್ ಶಿವನೇ ಸ್ವಯಂವರಸಭೆಗೆ ಆಗಮಿಸುವುದು ಅತ್ಯಂತ ಮಹತ್ವದ ಸೇರ್ಪಡೆಯಾಗಿದೆ. ಶಿವನು ಪರಬ್ರಹ್ಮನೇ ರಘುವಂಶದಲ್ಲಿ ಮನುಷ್ಯರೂಪದಲ್ಲಿ ಜನಿಸಿ ಈ ಮಹಾಸಭೆಗೆ ಬಂದು ಕುಳಿತಿರುವುದನ್ನು ನೋಡುವುದೇ ಮಹದ್ಭಾಗ್ಯ ಎಂದು ಹೇಳಿ, ಜನಕನನ್ನು ಪುಣ್ಯವಂತನೆಂದು ಹೊಗಳುತ್ತಾನೆ. ನಂತರ ರಘುವೀರನಾದ ರಾಮನನ್ನು ಸಂತೋಷದಿಂದ ಅಪ್ಪಿಕೊಂಡು, ಅವನ ಮಹಿಮೆಯನ್ನು ಕೊಂಡಾಡುತ್ತಾನೆ. ರಾಮನು ಶಿವನಿಗೆ ಪ್ರಣಾಮ ಮಾಡಿದಾಗ, ಶಿವನು ಆ ಕುವರನನ್ನು ಮೇಲಕ್ಕೆತ್ತಿ ತಕ್ಕೈಸಿಕೊಂಡು, ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಮೃದುಮಧುರ ವಚನಗಳಿಂದ ಸ್ತುತಿಗೈಯುತ್ತಾನೆ. ಈ ವರ್ಣನೆಗಳು ರಾಮನನ್ನು ಶಿವನಿಗೂ ಪೂಜ್ಯನಾದ ಪರಬ್ರಹ್ಮನಾಗಿ ಸ್ಥಾಪಿಸುತ್ತವೆ. ರಾಮನು ಬಿಲ್ಲನ್ನು ಮುರಿದಾಗ ಶಿವನು ಸಂತೋಷಪಡುವ ಕ್ರಿಯೆ ದೈವಿಕ ಸಂಕಲ್ಪದ ಪರಿಪೂರ್ಣತೆಯೆಂಬ ಭಾವವನ್ನು ಗಟ್ಟಿಗೊಳಿಸುತ್ತದೆ. ಇಂತಹ ಶಿವ–ರಾಮ ಸಂವಾದ, ಪರಸ್ಪರ ಆಲಿಂಗನ ಮತ್ತು ಸ್ತುತಿಯ ಪ್ರಸಂಗಗಳು ವಾಲ್ಮೀಕಿ ರಾಮಾಯಣದಲ್ಲಿ ಸಂಪೂರ್ಣವಾಗಿ ಅನುಪಸ್ಥಿತವಾಗಿವೆ.

ವೆಂಕಾಮಾತ್ಯ ರಾಮಾಯಣದಲ್ಲಿ ಸೀತೆಯ ಜನನಕಾಲದಲ್ಲಿಯೇ ನಾರದರು ದಿವ್ಯಜ್ಯೋತಿಯ ರೂಪದಲ್ಲಿ ಜನಕನ ಬಳಿಗೆ ಬಂದು ಭವಿಷ್ಯವಾಣಿಯನ್ನು ನೀಡಿರುವುದಾಗಿ ಹೇಳಲಾಗಿದೆ. "ಇಂದಿರಾಸತಿ ಧರಣಿಯಿಂದುದಿಸಿ ನಿಜತನುಜೆ ಯೆಂದೆನಿಸಿಕೊಂಡಿರ್ಪಳೀ ಕನ್ನಿಕಾಮಣಿಯ ಬಂಧುರಸ್ನೇಹದಿಂ ಸಲಹುವುದು ಸಕಲಶುಭಮೊದಗುವುದು ನಿನಗೆ ಬಳಿಕ ರವಿವಂಶಭವದೊಳ್ ರಮಾನಾಥ ದಯದಿ ಸಂಭವಿಸಿ ರಾಮಾಖ್ಯೆಯಿಂ ಸಲಹಿ ಕೌಶಿಕಮಖವ ಸುವಿವೇಕಮುಳ್ಳಂಗನೆಯ ಮಾಳ್ಪ ಪಾಷಾಣರೂಪಗೌತಮನರಸಿಯ ತವಕದಿಂ ಮಿಥಿಲೆಗೈತರುವನೀ ಕಾಮಿನಿಯನವಿರಳದ ಭಕ್ತಿಯಿಂದಾತಗರ್ಪಿಸಿ ಮಹೋತ್ಸವವ ನಿಟ್ಟಿಸಿ ಕೃತಾರ್ಥತೆವಡೆವುದು"[4] ಎಂದು ನಾರದರು ಜನಕನಿಗೆ ಉಪದೇಶಿಸುತ್ತಾರೆ. ಇದರ ಮೂಲಕ ಸೀತಾ–ರಾಮ ವಿವಾಹವು ಬಹಳ ಹಿಂದೆಯೇ ದೇವಸಂಕಲ್ಪದಲ್ಲಿ ನಿರ್ಧಾರಗೊಂಡ ದೈವಿಕ ಯೋಜನೆಯೆಂದು ಕವಿ ಸ್ಪಷ್ಟಪಡಿಸುತ್ತಾನೆ. ಇದಲ್ಲದೆ ಸುರಮುನಿಗಳು ವಿಷ್ಣುವು ರಾವಣನ ವಧೆಗಾಗಿ ರಾಮನಾಗಿ ಜನಿಸುವ ಸಂಗತಿಯನ್ನು ದಶರಥನಿಗೂ ತಿಳಿಸಿರುವರೆಂದು ವೆಂಕಾಮಾತ್ಯನು ಹೇಳುತ್ತಾನೆ. ಈ ಮೂಲಕ ರಾಮಾವತಾರ ಮತ್ತು ರಾವಣವಧೆಯ ನಡುವಿನ ಕಾರ್ಯಕಾರಣ ಸಂಬಂಧವನ್ನು

ಆರಂಭದಲ್ಲಿಯೇ ಸ್ಥಾಪಿಸುತ್ತಾನೆ. ಈ ಎಲ್ಲ ಪ್ರಸಂಗಗಳು ವಾಲ್ಮೀಕಿ ರಾಮಾಯಣದಲ್ಲಿ ಕಾಣಿಸುವುದಿಲ್ಲ. ವಾಲ್ಮೀಕಿಯಲ್ಲಿ ಸ್ವಯಂವರವು ರಾಜಸಭೆಯೊಳಗೆ ನಡೆಯುವ ಪರೀಕ್ಷೆಯಾಗಿದ್ದು, ದೇವತೆಗಳ ನೇರ ಹಸ್ತಕ್ಷೇಪ ಅಥವಾ ಭವಿಷ್ಯವಾಣಿಗಳ ಸರಣಿ ಇಲ್ಲ.

ವೆಂಕಾಮಾತ್ಯ ರಾಮಾಯಣದ ಬಾಲಕಾಂಡದ ಇಪ್ಪತ್ತೊಂದು ಮತ್ತು ಇಪ್ಪತ್ತೆರಡನೆಯ ಸಂಧಿಗಳಲ್ಲಿ ವಿವಾಹ ಸಂಭ್ರಮವನ್ನು ಕವಿ ಅತ್ಯಂತ ವೈಭವೋಪೇತವಾಗಿ, ಭಕ್ತಿಪರ ಹಾಗೂ ತಾತ್ವಿಕ ನೆಲೆಯಲ್ಲಿ ವಿಸ್ತಾರವಾಗಿ ವರ್ಣಿಸಿದ್ದಾನೆ. ಈ ಭಾಗವು ಕವಿಯ ಸ್ವಂತ ಸೃಜನಶೀಲ ಕಲ್ಪನೆಯ ಫಲವಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಸೀತಾ–ರಾಮರ ವಿವಾಹವನ್ನು ಅಖಿಲ ಲೋಕಾನುಗ್ರಹದ ಕಾರಣದಿಂದ ನಡೆಯುವ ದೈವಿಕ ಲೀಲೆಯಾಗಿ ರೂಪಿಸುವುದೇ ವೆಂಕಾಮಾತ್ಯನ ಮುಖ್ಯ ಉದ್ದೇಶವಾಗಿದೆ. ವಿವಾಹ ಸಂಭ್ರಮದ ನಂತರ ಬ್ರಹ್ಮ ಮತ್ತು ಶಿವರು ಸ್ವತಃ ಶ್ರೀರಾಮನನ್ನು ಸ್ತುತಿಸುವ ಪ್ರಸಂಗವನ್ನು ವೆಂಕಾಮಾತ್ಯನು ಸೇರಿಸಿದ್ದಾನೆ. ವಾಲ್ಮೀಕಿ ರಾಮಾಯಣದಲ್ಲಿ ವಿವಾಹದ ವ್ಯವಸ್ಥೆ ಹೆಚ್ಚು ಸಂಕ್ಷಿಪ್ತ ಮತ್ತು ವಿಧಿಬದ್ಧವಾಗಿದೆ. ವಿವಾಹದ ಕ್ರಮವು ರಾಜಸಭೆಯ ನಿಯಮಾನುಸಾರ ನಡೆಯುತ್ತದೆ; ಆದರೆ ದೇವತೆಗಳ ಸ್ತುತಿ ಅಥವಾ ಬ್ರಹ್ಮ–ಶಿವರು ರಾಮನನ್ನು ಹೊಗಳುವಂತಹ ದೈವಿಕ ವಿಸ್ತಾರ ಇಲ್ಲ. ವಾಲ್ಮೀಕಿಯ ನಿರೂಪಣೆಯಲ್ಲಿ ರಾಮನ ದೈವತ್ವವು ವಿವಾಹದ ಮೂಲಕ ತಕ್ಷಣ ಪ್ರಕಟಗೊಳ್ಳುವುದಿಲ್ಲ; ಅವನು ಇನ್ನೂ ಮನುಜ ಸ್ವರೂಪದ ವೀರನಾಗಿಯೇ ಮುಂದುವರಿಯುತ್ತಾನೆ.

ಸೀತೆಯನ್ನು ಬೀಳ್ಕೊಡುವ ಸಂದರ್ಭದಲ್ಲಿ ಜನಕನು ಗದ್ಗದಿತನಾಗಿ ತನ್ನ ಮಗಳನ್ನು ಕುರಿತು ಹೇಳುವ ಮಾತುಗಳು ವೆಂಕಾಮಾತ್ಯ ರಾಮಾಯಣದ ಅತ್ಯಂತ ಮಾನವೀಯ ಹಾಗೂ ಸಂವೇದನಾಶೀಲ ಪ್ರಸಂಗಗಳಲ್ಲಿ ಒಂದಾಗಿದೆ. ರಾಜನಾಗಿದ್ದರೂ ಸಹ, ಆ ಕ್ಷಣದಲ್ಲಿ ಜನಕನು ಸಾಮಾನ್ಯ ತಂದೆಯಾಗಿ ಪರಿವರ್ತನೆಗೊಳ್ಳುತ್ತಾನೆ. ಅವನು ಸೀತೆಗೆ ಉಪದೇಶಿಸುವ ಮಾತುಗಳಲ್ಲಿ ರಾಜಕೀಯ ಅಥವಾ ದೈವಿಕ ಭಾವಕ್ಕಿಂತ ಲೋಕಾನುಭವದ ನುಡಿಗಳೇ ಹೆಚ್ಚು ಕಾಣಿಸುತ್ತವೆ. "ಸಮಾಲೋಚನೆಯ ಸಂದರ್ಭಗಳಲ್ಲಿ ಮಂತ್ರಿಯಂತೆ ಬುದ್ಧಿವಂತಿಕೆಯ ಸಲಹೆ ನೀಡಬೇಕು, ಕರುಣೆಯಲ್ಲಿ ದಾಸ್ಯಭಾವವನ್ನು ತೋರಿಸಬೇಕು, ಪತಿಯು ತೃಪ್ತನಾಗುವಂತೆ ಮೃಷ್ಟಾನ್ನವನ್ನು ಉಣಿಸುವಲ್ಲಿ ತಾಯಿಯಂತೆ ವರ್ತಿಸಬೇಕು, ಮನಃಪೂರ್ವಕವಾಗಿ ಪತಿಯೊಡನೆ ಕೂಡುವಾಗ ರತಿಯಂತೆ ಶೋಭಿಸಬೇಕು, ಕ್ಷಮೆಯಲ್ಲಿ ಭೂಮಿತಾಯಿಯಂತೆ ಸಹನಶೀಲಳಾಗಿರಬೇಕು ಮತ್ತು ಗಂಡನೊಡನೆ ಧರ್ಮಾನುಕೂಲೆಯಾಗಿ ಬದುಕಬೇಕು"[5] ಎಂದು ಹೇಳುವ ಮೂಲಕ ಜನಕನು ಸೀತೆಯ ಮುಂದಿನ ಗೃಹಸ್ಥ ಜೀವನದ ಸಮಗ್ರ ಆದರ್ಶವನ್ನು ನಿರೂಪಿಸುತ್ತಾನೆ. ಇಂತಹ ಸೀತಾವಿದಾಯ ಪ್ರಸಂಗವು ವಾಲ್ಮೀಕಿ ರಾಮಾಯಣದಲ್ಲಿ ಕಂಡುಬರುವುದಿಲ್ಲ; ಅಲ್ಲಿ ವಿವಾಹ ನಂತರದ ಘಟನೆಗಳು ಹೆಚ್ಚು ಸಂಕ್ಷಿಪ್ತವಾಗಿದ್ದು, ಜನಕನ ಹೃದಯಾಳದ ಮಾತುಗಳಿಗೆ ಅವಕಾಶವಿಲ್ಲ.

ವಿವಾಹದ ನಂತರ ರಾಮ, ಸೀತೆ ಮತ್ತು ಇತರರು ಮರಳಿ ಅಯೋಧ್ಯೆಗೆ ಹೊರಟಾಗ ಎದುರಾಗುವ ಪರಶುರಾಮ ಪ್ರಸಂಗವೂ ವೆಂಕಾಮಾತ್ಯ ರಾಮಾಯಣದಲ್ಲಿ ವಿಭಿನ್ನ ಅರ್ಥವನ್ನೂ ವಿಸ್ತಾರವನ್ನೂ ಪಡೆದುಕೊಂಡಿದೆ. ಇಲ್ಲಿ ರಾಮನು ಪರಶುರಾಮನ ಶೌರ್ಯವನ್ನು ಮೀರಿಸಿ ಜಯ ಸಾಧಿಸುತ್ತಾನೆ. ಆದರೆ ಈ ಜಯವು ಕೇವಲ ಶಸ್ತ್ರಬಲದಿಂದಾಗಿರುವುದಿಲ್ಲ; ಅದು ಅವತಾರಗಳ ನಡುವಿನ ತಾತ್ವಿಕ ಸಂವಾದದಂತೆ ರೂಪುಗೊಳ್ಳುತ್ತದೆ. ಪರಶುರಾಮನಿಗೆ ರಾಮನು ವಿಷ್ಣುವಿನ ಅವತಾರ ಎಂಬುದು ಈಗಾಗಲೇ ತಿಳಿದಿರುತ್ತದೆ. ಆದಕಾರಣ ಸೋಲಿನ ನಂತರ ಅವನೊಳಗೆ ಅಹಂಕಾರಭಂಗದೊಂದಿಗೆ ಜ್ಞಾನೋದಯವೂ ಉಂಟಾಗುತ್ತದೆ. ರಾಮನ ಅಪ್ಪಣೆಯನ್ನು ಪಡೆದು ಅವನು ಮಹೇಂದ್ರ ಪರ್ವತದ ಕಡೆಗೆ ತೆರಳುತ್ತಾನೆ ಮತ್ತು ರಾಮನನ್ನು ಸ್ತುತಿಸುತ್ತಾನೆ. ಈ ಸ್ತುತಿಯಲ್ಲಿ ಪರಶುರಾಮನು ತನ್ನ ಅವತಾರದ ಪಾತ್ರ ಮುಗಿದಿರುವುದನ್ನೂ, ಪರಬ್ರಹ್ಮನ ಕಾರ್ಯಭಾರವನ್ನು ಈಗ ರಾಮನೇ ಹೊತ್ತಿರುವುದನ್ನೂ ಅಂಗೀಕರಿಸುವ ಭಾವ ಅಡಗಿದೆ. ವಾಲ್ಮೀಕಿ ರಾಮಾಯಣದಲ್ಲಿ ಈ ಪ್ರಸಂಗದ ಸ್ವರೂಪ ಸ್ವಲ್ಪ ಭಿನ್ನವಾಗಿದೆ. ಅಲ್ಲಿ ಶ್ರೀರಾಮನು ಪರಶುರಾಮನ ಗರ್ವವನ್ನು ಭಂಗಪಡಿಸಿ, ಅವನ ತಪೋಲೋಕವನ್ನು ನಾಶಮಾಡಿ ಮಹೇಂದ್ರ ಪರ್ವತಕ್ಕೆ ಕಳುಹಿಸುತ್ತಾನೆ. ಪರಶುರಾಮನಿಂದ ನಡೆಯುವ ಸ್ತುತಿ ಅಥವಾ ಅವನಿಗೆ ರಾಮನ ಅವತಾರತತ್ವ ಪೂರ್ಣವಾಗಿ ಪ್ರಕಟವಾಗುವ ಭಾವನೆ ಅಷ್ಟು ವಿಸ್ತಾರವಾಗಿ ವ್ಯಕ್ತವಾಗುವುದಿಲ್ಲ.

ವೆಂಕಾಮಾತ್ಯನು ತನ್ನ ರಾಮಾಯಣದ ಕಥಾಸರಣಿಯಲ್ಲಿ ವಾಲ್ಮೀಕಿ ರಾಮಾಯಣವನ್ನು ಆಧಾರವಾಗಿಸಿಕೊಂಡಿದ್ದರೂ, ಅನೇಕ ಪ್ರಮುಖ ಸಂದರ್ಭಗಳಲ್ಲಿ ಸ್ವಂತ ದೃಷ್ಟಿಕೋನ, ತಾತ್ವಿಕ ಚಿಂತನೆ ಮತ್ತು ಕಾವ್ಯಪ್ರತಿಭೆಯನ್ನು ಸ್ಪಷ್ಟವಾಗಿ ಪ್ರದರ್ಶಿಸಿದ್ದಾನೆ. ಮೇಲಿನ ಪ್ರಸಂಗಗಳೇ ಇದಕ್ಕೆ ಸ್ಪಷ್ಟ ಸಾಕ್ಷಿಗಳಾಗಿವೆ. ವಾಲ್ಮೀಕಿಯ ಕಥಾನಕವನ್ನು ಅನುಸರಿಸುವ ಹಂತದಲ್ಲಿಯೇ ಕವಿಯು ಅದನ್ನು ಯಥಾವತ್ತಾಗಿ ಅನುವಾದಿಸುವುದಕ್ಕೆ ಮಾತ್ರ ಸೀಮಿತನಾಗದೆ, ಪೌರಾಣಿಕ ಪರಂಪರೆ, ಭಕ್ತಿದರ್ಶನ ಮತ್ತು ವೈಷ್ಣವ ತತ್ತ್ವವನ್ನು ಒಳಗು ಮಾಡಿಕೊಂಡು ಕಥೆಗೆ ಹೊಸ ಆಯಾಮವನ್ನು ನೀಡಿದ್ದಾನೆ. ವೆಂಕಾಮಾತ್ಯನು ಬಾಲಕಾಂಡದಲ್ಲಿ ಶ್ರೀರಾಮನ ದೈವತ್ವವನ್ನು ಪ್ರಬಲವಾಗಿ ಪ್ರತಿಪಾದಿಸುವ ಜೊತೆಗೆ, ಆತನ ಮಾನವಸಹಜ ಭಾವನೆಗಳನ್ನು ಸಹ ಸಮಾನವಾಗಿ ಚಿತ್ರಿಸಿರುವುದು ಗಮನಾರ್ಹವಾಗಿದೆ. ಈ ಕಾಂಡದಲ್ಲಿ ಬರುವ ಅನೇಕ ಪೌರಾಣಿಕ ಕಥೆಗಳ ನಿರೂಪಣೆಯೂ ಮೂಲಗ್ರಂಥಕ್ಕಿಂತ ಭಿನ್ನವಾಗಿದೆ. ಕುಶನಾಭನ ಪುತ್ರಿಯರು ವಾಯುವಿನಿಂದ ಕುರೂಪಿಗಳಾಗುವ ಪ್ರಸಂಗದಲ್ಲಿ ಸ್ತ್ರೀಗೌರವ ಮತ್ತು ಧೈರ್ಯದ ಮೌಲ್ಯಗಳನ್ನು ಕವಿ ಒತ್ತಿ ಹೇಳುತ್ತಾನೆ. ವಿಶ್ವಾಮಿತ್ರನ ಅಕ್ಕನಾದ ಸತ್ಯವತಿಯ ಪ್ರಸಂಗವು ತ್ಯಾಗ ಮತ್ತು ಧರ್ಮಪಾಲನೆಯ ಆದರ್ಶವನ್ನು ಮುನ್ನೆಲೆಗೆ ತರುತ್ತದೆ. ಶಿವ–ಪಾರ್ವತಿಯರ ಕಥೆಗಳು ರಾಮನ ಅವತಾರಕ್ಕೆ ದೈವಿಕ ಹಿನ್ನೆಲೆಯನ್ನು ನೀಡುವ ಉದ್ದೇಶದಿಂದ ವಿಸ್ತಾರವಾಗಿ ಬರುವುದನ್ನು ಕಾಣಬಹುದು. ಸಗರನ ಯಜ್ಞಕುದುರೆಯನ್ನು ಹುಡುಕುವ ಕಥೆ, ಭಗೀರಥನ ಚರಿತ್ರೆ ಮತ್ತು ಗಂಗಾವತರಣದ

ಪ್ರಸಂಗಗಳು ಕೇವಲ ಪೌರಾಣಿಕ ಕಥೆಗಳಾಗಿ ಮಾತ್ರವಲ್ಲದೆ, ಭೂಭಾರ ನಿವಾರಣೆ, ಪಿತೃಋಣ ವಿಮೋಚನೆ ಮತ್ತು ಲೋಕಕಲ್ಯಾಣ ಎಂಬ ತತ್ತ್ವಗಳೊಂದಿಗೆ ಜೋಡಣೆಗೊಂಡು ನಿರೂಪಿತವಾಗುತ್ತವೆ. ಹೀಗಾಗಿ ವೆಂಕಾಮಾತ್ಯ ರಾಮಾಯಣದ ಬಾಲಕಾಂಡವು ಕವಿಯ ಭಕ್ತಿಭಾವ, ವೈಷ್ಣವ ತತ್ತ್ವ , ಪುರಾಣೋಕ್ತ ಕಥಾನಕಗಳು ಮತ್ತು ಮಾನವೀಯ ಸಂವೇದನೆಗಳ ಸಮನ್ವಯದಿಂದ ವಿಶಿಷ್ಟ ಸ್ವರೂಪವನ್ನು ಪಡೆದಿದೆ. ಈ ಕಾರಣದಿಂದಲೇ ವೆಂಕಾಮಾತ್ಯನು ವಾಲ್ಮೀಕಿಗೆ ಋಣಿಯಾಗಿದ್ದರೂ, ತನ್ನತನವನ್ನು ಮೆರೆದ ಕವಿಯಾಗಿ ಗುರುತಿಸಲ್ಪಡುತ್ತಾನೆ. ಅವನ ರಾಮಾಯಣವು ಪರಂಪರೆಯ ನಿರಂತರತೆಯ ಜೊತೆಗೆ ಸೃಜನಶೀಲ ನವೀನತೆಯನ್ನೂ ಒಟ್ಟಿಗೆ ಒಳಗೊಂಡಿರುವ ಮಹತ್ವದ ಕನ್ನಡ ಕಾವ್ಯಕೃತಿಯಾಗಿ ಕಾಣಿಸುತ್ತದೆ.

**ಕೊನೆ ಟಿಪ್ಪಣಿಗಳು:**

1. ಕವಿ ಪ್ರಧಾನ ವೆಂಕಪ್ಪಯ್ಯ (ಸಂ. ಪಿ.ವಿ. ನಾರಾಯಣ), (2024), ಶ್ರೀರಾಮಕಥಾಮೃತ (ಸಂಪುಟ 1), ಬೆಂಗಳೂರು: ಪ್ರಧಾನ್ ಪ್ರಕಾಶನ, ಬಾಲಕಾಂಡ, ಪೀಠಿಕಾ ಸಂಧಿ, ಪದ್ಯ 25
2. ಕವಿ ಪ್ರಧಾನ ವೆಂಕಪ್ಪಯ್ಯ (ಸಂ. ಪಿ.ವಿ. ನಾರಾಯಣ), (2024), ಶ್ರೀರಾಮಕಥಾಮೃತ (ಸಂಪುಟ 1), ಬೆಂಗಳೂರು: ಪ್ರಧಾನ್ ಪ್ರಕಾಶನ, ಬಾಲಕಾಂಡ, 2ನೇ ಸಂಧಿ, ಪದ್ಯ 10–34. [ಸೂಚನೆ: ಶೌನಕಾದಿಗಳಿಗೆ ಗೊಂದಲ ಉಂಟಾಗಲು ಕಾರಣವಾಗಿರುವ ರಾಮನ ಅವತಾರದ ಬಗೆಗಿನ ಕಥೆಗಳನ್ನು ಕವಿಯು ಇಲ್ಲಿ ವಿಸ್ತಾರವಾಗಿ ನಿರೂಪಿಸಿದ್ದಾನೆ]
3. ಕವಿ ಪ್ರಧಾನ ವೆಂಕಪ್ಪಯ್ಯ (ಸಂ. ಪಿ.ವಿ. ನಾರಾಯಣ), (2024), ಶ್ರೀರಾಮಕಥಾಮೃತ (ಸಂಪುಟ 1), ಬೆಂಗಳೂರು: ಪ್ರಧಾನ್ ಪ್ರಕಾಶನ, ಬಾಲಕಾಂಡ, ಸಂಧಿ 15, ಪದ್ಯ 53
4. ಕವಿ ಪ್ರಧಾನ ವೆಂಕಪ್ಪಯ್ಯ (ಸಂ. ಪಿ.ವಿ. ನಾರಾಯಣ), (2024), ಶ್ರೀರಾಮಕಥಾಮೃತ (ಸಂಪುಟ 1), ಬೆಂಗಳೂರು: ಪ್ರಧಾನ್ ಪ್ರಕಾಶನ, ಬಾಲಕಾಂಡ, ಸಂಧಿ 19, ಪದ್ಯ 63–64
5. ಕವಿ ಪ್ರಧಾನ ವೆಂಕಪ್ಪಯ್ಯ (ಸಂ. ಪಿ.ವಿ. ನಾರಾಯಣ), (2024), ಶ್ರೀರಾಮಕಥಾಮೃತ (ಸಂಪುಟ 1), ಬೆಂಗಳೂರು: ಪ್ರಧಾನ್ ಪ್ರಕಾಶನ, ಬಾಲಕಾಂಡ, ಸಂಧಿ 23, ಪದ್ಯ 24

## ಪರಾಮರ್ಶನ ಗ್ರಂಥಗಳು:

1. ನಾರಾಯಣ ಪಿ.ವಿ. (ಸಂ.), (2024), ಶ್ರೀರಾಮಕಥಾಮೃತ ಸಂ.1, ಬೆಂಗಳೂರು: ಪ್ರಧಾನ್ ಪ್ರಕಾಶನ.
2. ಚಂದ್ರಶೇಖರನ್ ಟಿ. (ಸಂ.), (1956), ವೆಂಕಾಮಾತ್ಯಕವಿವಿರಚಿತಂ ಶ್ರೀಮದ್ರಾಮಾಯಣಂ ಬಾಲಕಾಂಡಂ, ಮದ್ರಾಸ್: ಗವರ್ನ್ಮೆಂಟ್ ಓರಿಯೆಂಟಲ್ ಮಾನ್ಯುಸ್ಕ್ರಿಪ್ಟ್ ಲೈಬ್ರರಿ.
3. ನಾರಾಯಣ ಪಿ.ವಿ., (2020), ಶ್ರೀರಾಮಕಥಾಮೃತ ಸಂ 1, ಬೆಂಗಳೂರು: ವಸಂತ ಪ್ರಕಾಶನ.
4. ರಂಗನಾಥಶರ್ಮಾ ಎನ್. (ಅನು.), (1972), ಶ್ರೀಮದ್ವಾಲ್ಮೀಕಿರಾಮಾಯಣಮ್ ಬಾಲಕಾಂಡಃ, ಬೆಂಗಳೂರು: ರಾಮಾಯಣ ಪ್ರಕಾಶನ ಸಮಿತಿ.
5. ಶ್ರೀನಿವಾಸ ಅಯ್ಯಂಗಾರ್ ಸಿ.ಎನ್., (2024), ಕನ್ನಡ ವಾಲ್ಮೀಕಿ ರಾಮಾಯಣ (ಮೊದಲನೆಯ ಸಂಪುಟ), ಮೈಸೂರು: ಡಿ.ವಿ.ಕೆ. ಮೂರ್ತಿ ಪ್ರಕಾಶನ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.